ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 35
ಸಂಪುಟ: 05 ಸಂಚಿಕೆ: 35
Date: 12-02-2026 Thursday
RNI NO : KARKAN/2021/80805 L2/RNP-1285/TMR/2025-27
Page :4
ಪುಟ : 4
Price: 1.00
ಬೆಲೆ: 1.00 ರೂ

## ಸರ್ಕಾರಿ ಶಾಲೆಗಳ 'ನಲಿ ಕಲಿ' ಯೋಜನೆ ವಿಫಲ! ಶಿಕ್ಷಣ ಸಚಿವರಿಗೆ ವರದಿ ಸಲ್ಲಿಕೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರವು 'ನಲಿ ಕಲಿ' ಯೋಜನೆ ಮಕ್ಕಳ ಉದ್ದೇಶಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದು ವರದಿ ಮಾಡಿದೆ. ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದ ವರದಿಯಲ್ಲಿ, ಶಿಕ್ಷಕರ ತರಬೇತಿ, ಬಹುತರಗತಿ ನಿರ್ವಹಣೆ, ಕಲಿಕಾ ಸಾಮಗ್ರಿ ಮತ್ತು ಮೂಲಸೌಕರ್ಯಗಳ ಕೊರತೆ ಯೋಜನೆಯ ವೈಫಲ್ಯಕ್ಕೆ ಕಾರಣವೆಂದು ಹೇಳಲಾಗಿದೆ. ಇದು ಸರ್ಕಾರಿ ಶಾಲೆಗಳ ಮೇಲಿನ ನಂಬಿಕೆ ಕುಗ್ಗಿಸಿ, ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುವಂತೆ ಮಾಡಿದೆ.



ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಜಾರಿಯಲ್ಲಿರುವ 'ನಲಿ ಕಲಿ' ಯೋಜನೆ ಮಕ್ಕಳ ಉದ್ದೇಶಗಳನ್ನು ಈಡೇರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಗಂಭೀರ ಅಸಮಾಧಾನ ವ್ಯಕ್ತಪಡಿಸಿದೆ. ಈ ಕುರಿತು ಸಮಗ್ರ ವರದಿಯನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಲಾಗಿದೆ.

1995–96ರಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯಲ್ಲಿ ಪ್ರಾಯೋಗಿಕವಾಗಿ ಆರಂಭವಾದ ನಲಿ ಕಲಿ ಯೋಜನೆ, 2010–11ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ವಿಸ್ತರಿಸಲಾಯಿತು. ಮಕ್ಕಳಿಗೆ ಚಟುವಟಿಕೆ ಆಧಾರಿತ ಹಾಗೂ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ನೀಡುವುದು, ಭಾಷಾ ಕೌಶಲ್ಯವನ್ನು ವೃದ್ಧಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಆದರೆ ಕಾಲಕ್ರಮೇಣ ಯೋಜನೆ ಪರಿಣಾಮಕಾರಿತ್ವ ಕಳೆದುಕೊಂಡಿದೆ ಎಂದು ವರದಿ ಸೂಚಿಸಿದೆ.ಶಿಕ್ಷಕರಿಗೆ ಸಮರ್ಪಕ ತರಬೇತಿ ಕೊರತೆ, ಬಹುತರಗತಿ ನಿರ್ವಹಣೆಯಲ್ಲಿ ಸಮಸ್ಯೆಗಳು, ಹೆಚ್ಚಿನ ವಿದ್ಯಾರ್ಥಿಗಳ ಕಾರಣ ವೈಯಕ್ತಿಕ ಗಮನದ ಅಭಾವ, ಅಗತ್ಯ ಕಲಿಕಾ ಸಾಮಗ್ರಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಅಭಾವ ಪ್ರಮುಖ ಕಾರಣಗಳಾಗಿವೆ. ಮೌಲ್ಯಮಾಪನ ವ್ಯವಸ್ಥೆಯಲ್ಲಿನ ದೋಷಗಳು ಮತ್ತು ಮೂರನೇ ತರಗತಿಯ ನಂತರ ವಿದ್ಯಾರ್ಥಿಗಳಿಗೆ ಹೊಂದಾಣಿಕೆ ಸಮಸ್ಯೆಯೂ ಕಂಡುಬಂದಿದೆ.ಮೂರು ತರಗತಿಗಳಿಗೆ ಒಬ್ಬ ಶಿಕ್ಷಕ ಎಂಬ ವ್ಯವಸ್ಥೆಗೆ ಪೋಷಕರಿಂದ ಆಕ್ರೋಶ ವ್ಯಕ್ತವಾಗಿದೆ. ಭಾಷಾ ಕಲಿಕೆಯ ಗುಣಮಟ್ಟ ಹೆಚ್ಚಳವಾಗಿಲ್ಲ ಎಂಬ ಅಸಮಾಧಾನವೂ ವ್ಯಕ್ತವಾಗಿದೆ. ಈ ಎಲ್ಲಾ ಕಾರಣಗಳಿಂದ ಸರ್ಕಾರಿ ಶಾಲೆಗಳ ಮೇಲಿನ ನಂಬಿಕೆ ಕುಸಿದು, ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.



ತುಮಕೂರು ಜಿಲ್ಲಾ ಜೆಡಿಎಸ್ ಜಿಲ್ಲಾಧ್ಯಕ್ಷರಾಗಿ ನೂತನವಾಗಿ ನೇಮಕವಾಗಿರುವ ಮಾಜಿ ಶಾಸಕ ಹೆಚ್.ನಿಂಗಪ್ಪ ಅವರನ್ನು ನಗರದ ಜಿಲ್ಲಾ ಕಚೇರಿಯಲ್ಲಿ ಮುಖಂಡರು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಿದರು. ನಗರಪಾಲಿಕೆ ಮಾಜಿ ಉಪಮೇಯರ್ ಟಿ.ಆರ್.ನಾಗರಾಜ್, ಮಾಜಿ ಸದಸ್ಯರಾದ ಹೆಚ್‌ಡಿಕೆ ಮಂಜುನಾಥ್, ಶ್ರೀನಿವಾಸ್, ಶ್ರೀನಿವಾಸ್‌ಪ್ರಸಾದ್, ಟಿ.ಹೆಚ್.ಬಾಲಕೃಷ್ಣ, ಟಿ.ಜಿ.ನರಸಿಂಹರಾಜು, ಮುಖಂಡರಾದ ಸೋಲಾರ್ ಕೃಷ್ಣಮೂರ್ತಿ, ತಾಹೇರಾ ಕುಲ್ಸಂ, ಗುರು ಬಳ್ಳುಕರಾಯ, ಕೆಂಪರಾಜು, ಇತರರು ಇದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ತಂದೆ–ತಾಯಿ ಗುರುವಿನ ಋಣ ತಿರಿಸಲು ಮಾನವ ಜನ್ಮ ಬೇಕು : ಸಿಎಓ, ನರಸಿಂಹಮೂರ್ತಿ

ವರದಿ : ಕೋರಾ ವೀರಣ್ಣ




ತುಮಕೂರು: ಮನುಷ್ಯನ ಜೀವನದಲ್ಲಿ ಶಿಕ್ಷಣ ಬಹಳ ಮುಖ್ಯವಾಗಿದ್ದು ನೈತಿಕ ಶಿಕ್ಷಣದಿಂದ ಮೌಲ್ಯಗಳು, ಬದುಕು ಬದಲಾಗುತ್ತದೆ ಪ್ರತಿಯೊಬ್ಬ ತಾಯಿ ತಂದೆಯು ತನ್ನ ಮಕ್ಕಳಿಗೆ ತಪ್ಪದೇ ಶಿಕ್ಷಣ ಕೊಡಿಸುವುದು ಆದ್ಯ ಕರ್ತವ್ಯವಾಗಿದೆ ತಂದೆ – ತಾಯಿ ಗುರುವಿನಿಂದ ಶಿಕ್ಷಣ ಪಡೆದ ನಮಗೆ ಅವರ ಋಣ ತಿರಿಸಲು ಈ ಮಾನವ ಜನ್ಮ ಸಾಕು ಎಂದು ಜಿಲ್ಲಾ ಪಂಚಾಯತ್ ನ ಮುಖ್ಯ ಲೆಕ್ಕಾಧಿಕಾರಿ ನರಸಿಂಹಮೂರ್ತಿ ಅವರು ತಿಳಿಸಿದರು.

ತುಮಕೂರು ತಾಲ್ಲೂಕಿನ ಕೋರಾ ಗ್ರಾಮದ ಸರ್ವಮಂಗಳ ನಾಗಯ್ಯ ಸ್ಮರಣಾರ್ಥ ಇವರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ಚಿಣ್ಣರ ಬಣ್ಣದ ಕಲರವ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಸಿಇಓ ನರಸಿಂಹಮೂರ್ತಿ ಅವರು ಮಾತನಾಡಿದರು.

ಇಂದು ಓದುವ ಪ್ರತಿಯೊಬ್ಬ ಮಕ್ಕಳು ಮುಂದಿನ ದಿನದಲ್ಲಿ ಸಾಧನೆ ಮಾಡುವಂತಹ ವಿಜ್ಞಾನಿಗಳು, ರಾಜಕಾರಣಿಗಳು, ಭವಿಷ್ಯದ ತಂತ್ರಜ್ಞರು, ಖಗೋಳಶಾಸ್ತ್ರಜ್ಞರು ಹಾಗಿ ಹೊರ ಹೋಗುತ್ತಾರೆ ಈ ದಿವಸದಲ್ಲಿ ವಿದ್ಯಾರ್ಥಿಗಳು ಕೂಡ ಸಮಯ ವ್ಯರ್ಥ ಮಾಡದೇ ಬಹಳ ಶ್ರಮಪಟ್ಟು ಶಾಲೆಯಲ್ಲಿ ಅಧ್ಯಯನಶೀಲರಾಗಿ ಶಿಕ್ಷಕರು ನೀಡಿದ ಪ್ರತಿಯೊಂದು ಮಾಹಿತಿಯನ್ನು ಅರ್ಥ ಮಾಡಿಕೊಂಡು ಕಲಿಯಬೇಕು ಎಂದರು.

ಇಂದಿನ ಸ್ಪರ್ಧಾತ್ಮಕಯುಗದಲ್ಲಿ ಜ್ಞಾನ ಕೌಶಲ್ಯ ಅಗತ್ಯವಾಗಿದ್ದು ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಂಡಾಗ ಶಿಕ್ಷಣ ಹಾದಿ ಸುಲಭವಾಗಲಿದ್ದು ಅಂತಹ ಮೌಲ್ಯಯುತ ಶಿಕ್ಷಣ ಈ ಶಾಲೆಯಲ್ಲಿ ದೊರೆಯುತ್ತಿದೆ ಹರ್ಷ ದಂಪತಿಗಳು ನಿರ್ಮಿಸಿದ ಈ ಶಾಲೆಯಲ್ಲಿ ಮಹತ್ತರ ಸಾಧನೆಗಳಾಗಿವೆ ನಾವುಗಳು ಸ್ಥಳೀಯವಾಗಿ ಶಾಲಾ ಅಭಿವೃದ್ಧಿ ಮಂಡಳಿಯ ಜೊತೆಗೆ ತೊಡಗಿಸಿಕೊಂಡಾಗ ಶಾಲೆಯನ್ನ ಮತಷ್ಟು ಎತ್ತರಕ್ಕೆ ಕೊಂಡೊಯ್ಯಲು ಅನುವಾಗಲಿದೆ ಎಂದು ತಿಳಿಸಿದರು.

ಎಸ್ ಡಿ ಎಂ ಸಿ ಅಧ್ಯಕ್ಷ ಡಮರುಗ ಉಮೇಶ್ ಅವರು ಮಾತನಾಡಿ ಶಾಲಾ ಮಕ್ಕಳಿಗೆ ಶಿಕ್ಷಣದ ಜೊತೆಗೆ ರಂಗಭೂಮಿ ಕಲೆ ಸಾಹಿತ್ಯದ ಅಭಿರುಚಿಯನ್ನ ಪರಿಚಯಿಸುವ ಕೆಲಸವನ್ನು ಆಡಳಿತ ಮಂಡಳಿ ಮಾಡುತ್ತಿದೆ ಮಕ್ಕಳು ವೇದಿಕೆಯ ಮೇಲೆ ತೊಡಗಿಕೊಂಡಾಗ ಅವರಲ್ಲಿನ ಧೈರ್ಯದ ಮನೋಭಾವನೆ ಸ್ಥಾನಪಲ್ಲಟವಾಗುತ್ತದೆ ಮುಂದೆ ಇದು ಓದಿಗೆ ಪ್ರೇರಕವಾಗುತ್ತದೆ ಇಂತಹ ವಾತಾವರಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಕೋರಾ ಶಾಲಾ ಆಡಳಿತ ಮಂಡಳಿ ಮಾಡುತ್ತಿದೆ ಕೋರಾ ಶಾಲೆಗೆ ಅತ್ಯುತ್ತಮವಾದ ಸಭಾಂಗಣದ ಅವಶ್ಯಕತೆ ಇದ್ದು ಎಲ್ ಕೆಜಿ, ಯುಕೆಜಿ ಮಕ್ಕಳಿಗೂ ಮಧ್ಯಾಹ್ನದ ಬಿಸಿ ಊಟ ವ್ಯವಸ್ಥೆಯನ್ನು ಮಾಡಲು ಆಡಳಿತ ಮಂಡಳಿ ನಿರ್ಧರಿಸಿದ್ದು ಇದಕ್ಕೆ ಸ್ಥಳೀಯರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.

ಕೋರಾ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ನಜೀರ್ ಅಹ್ಮದ್ ಅವರು ಮಾತನಾಡಿ ಕೊರಾ ಗ್ರಾಮದ ಮಕ್ಕಳು ರಾಷ್ಟ್ರೀಯ ಹೆದ್ದಾರಿ ದಾಟಿ ಶಾಲೆಗೆ ಹೋಗಬೇಕಿತ್ತು ಇದರಿಂದ ಕೆಲ ಮಕ್ಕಳು ಸಾವಿಗೀಡಾದರು ಶಾಲೆಯ ಕಟ್ಟಡ ದಾನಿಗಳಾದ ಹರ್ಷ ಅವರಿಗೆ ಈ ಸಮಸ್ಯೆಯನ್ನು ಗಮನಕ್ಕೆ ತಂದಾಗ ಸುಮಾರು ಎರಡು ಕೋಟಿ ರೂ ವೆಚ್ಚದಲ್ಲಿ ಸುಸಜ್ಜಿತವಾದ ಶಾಲೆಯನ್ನ ನಿರ್ಮಿಸಿದ್ದಾರೆ ಅವರ ತಾಯಿಯೂ ಶಾಲೆಯಲ್ಲಿ ವ್ಯಾಸಂಗ ಮಾಡಿದ ನೆನಪಿನ ಅರ್ಥವಾಗಿ ಈ ಶಾಲೆ ನಿರ್ಮಾಣ ಮಾಡಿದ್ದು ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಜಿ ಹಾಗೂ ಹಾಲಿ ಮುಖ್ಯೋಪಾಧ್ಯಾಯರ ಸಹಕಾರದಿಂದ ಶಾಲೆ ಅತ್ಯುತ್ತಮವಾಗಿ ನಡೆಯುತ್ತಿದೆ ಈ ಕ್ಷೇತ್ರದ ಶಾಸಕರು ಹಾಗೂ ಗೃಹ ಮಂತ್ರಿಗಳಾದ ಡಾ. ಜಿ ಪರಮೇಶ್ವರ್ ಅವರು ಶಾಲಾ ಅಭಿವೃದ್ಧಿಗೆ 10 ಲಕ್ಷ ರೂಗಳನ್ನು ಮಂಜೂರು ಮಾಡಿದ್ದಾರೆ ಗ್ರಾಮ ಪಂಚಾಯಿತಿ ಸದಸ್ಯರ ಬೇಡಿಕೆಯಂತೆ ಮುಂದಿನ ದಿನಗಳಲ್ಲಿ ಶಾಲೆಯ ಆಟದ ಮೈದಾನ ನಿರ್ಮಾಣ, ಸಭಾಂಗಣ ನಿರ್ಮಾಣ ಸೇರಿದಂತೆ ಎಲ್ ಕೆಜಿ ಮತ್ತು ಯುಕೆಜಿ ಮಕ್ಕಳ ಬಿಸಿಯೂಟಕ್ಕೆ ಅಡುಗೆ ಪಾತ್ರೆಗಳನ್ನು ಒದಗಿಸುವುದರ ಜೊತೆಗೆ ಎಲ್ಲಾ ರೀತಿಯಲ್ಲಿ ನಮ್ಮೆಲ್ಲಾ ಸಹಕಾರ ಇರುತ್ತದೆ ಎಂದು ತಿಳಿಸಿದರು.

ವಾರ್ಷಿಕೋತ್ಸವ ಸಮಾರಂಭದಲ್ಲಿ ದೈಹಿಕ ಶಿಕ್ಷಕ ಹರೀಶ್ ರವರ ನಿರ್ದೇಶನದ ಕುರುಕ್ಷೇತ್ರದ ದ್ವಾರಕ ನಗರದ ಕೃಷ್ಣ ದುರ್ಯೋಧನರ ಸಂಭಾಷಣೆಯ ಕುರಿತ 40 ನಿಮಿಷಗಳ ನಾಟಕ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿ ಚಪ್ಪಾಳೆ ಗಿಟ್ಟಿಸಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರುಗಳಾದ ಬಸವರಾಜು, ಯತೀಶ್, ಶರತ್ ಮುಖ್ಯೋಪಾಧ್ಯಾಯರಾದ ಶಶಿಕಲಾ ಸಹ ಶಿಕ್ಷಕರುಗಳಾದ ಸೀತಾ ಲಕ್ಷ್ಮಿ, ಸೌಮ್ಯ, ವಿಶ್ವನಾಥ್ , ರಮೇಶ್ ಪೋಷಕರು ಶಾಲಾ ಮಕ್ಕಳು ಹಾಗೂ ಎಸ್‌ಡಿಎಂ ಸಿ ಸದಸ್ಯರುಗಳು ಇತರರು ಉಪಸ್ಥಿತರಿದ್ದರು.



## ಸುರಿಗೇನಹಳ್ಳಿ ಅರಣ್ಯ ಪ್ರದೇಶಕ್ಕೆ ಬೆಂಕಿ ಕಂಗಾಲಾದ ಪಕ್ಷಿ ಸಂಕುಲ

ಗುಬ್ಬಿ: ಸುರಿಗೇನಹಳ್ಳಿ ಬಳಿಯ ಸುಮಾರು 80 ಎಕರೆ ಅರಣ್ಯ ಪ್ರದೇಶದಲ್ಲಿ ಕಾಣಿಸಿಕೊಂಡ ಬೆಂಕಿ ಪರಿಣಾಮ ಮರಗಿಡಗಳು ಹೊತ್ತಿ ಉರಿದು ಅಲ್ಲಿ ನೆಲಸಿದ್ದ ಸಾವಿರಾರು ಪಕ್ಷಿ ಸಂಕುಲ ಕಂಗಾಲಾದ ಘಟನೆ ಪರಿಸರ ಪ್ರೇಮಿಗಳಲ್ಲಿ ಬೇಸರ ತಂದಿದೆ.

ಬೇಸಿಗೆ ಆರಂಭದ ಈ ಕಾಲದಲ್ಲಿ ಅರಣ್ಯಕ್ಕೆ ಬೆಂಕಿ ತಾಗದಂತೆ ಕಾಪಾಡಬೇಕಿದೆ. ಕಿಡಿಗೇಡಿಗಳ ಕೃತ್ಯ ಬೆಂಕಿಗೆ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ. ಇದೇ ಅರಣ್ಯ ಪ್ರದೇಶಕ್ಕೆ ಅನೇಕ ಬಾರಿ ಬೆಂಕಿ ಕಾಣಿಸಿಕೊಂಡು ವನ್ಯ ಸಂಪತ್ತು ನಾಶವಾಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಸ್ಥಳೀಯರು ದೂರುತ್ತಿದ್ದಾರೆ. ಸುಮಾರು 80 ಎಕರೆ ಅರಣ್ಯ ಪ್ರದೇಶ ಹೊಂದಿರುವ ಸುರಿಗೇನಹಳ್ಳಿ ಗುಡ್ಡದಲ್ಲಿ ಇತಿಹಾಸ ಪ್ರಸಿದ್ಧ ಗುಡ್ಡದ ರಂಗನಾಥಸ್ವಾಮಿ ದೇವಾಲಯವಿದೆ. ಜೊತೆಗೆ ಸುಂದರವಾದ ಹಸಿರು ವನಸಿರಿ ದೇವಾಲಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿಸಿದೆ.

ಸಾವಿರಾರು ಪಕ್ಷಿ ಸಂಕುಲ ಬೀಡು ಬಿಟ್ಟ ಅರಣ್ಯದಲ್ಲಿ ಕಂಡ ಬೆಂಕಿ ಹಸಿ ಮರಗಿಡಗಳನ್ನು ಆಹುತಿ ಪಡೆದಿದೆ. ಗೂಡು ಕಟ್ಟಿ ತನ್ನ ಮರಿಗಳೊಟ್ಟಿಗೆ ಇದ್ದ ಹಕ್ಕಿಗಳ ಆಕ್ರಂದನ ಮುಗಿಲು ಮುಟ್ಟಿದ್ದು ಪರಿಸರ ಪ್ರೇಮಿಗಳಲ್ಲಿ ಬೇಸರ ಮೂಡಿಸಿದೆ.

## ಗುಬ್ಬಿ ತಾಲ್ಲೂಕಿನಾದ್ಯಂತ ಪ್ರಮುಖ ರಸ್ತೆಗಳಿಗೆ ಸಿಸಿ ಕ್ಯಾಮೆರಾ : ಶಾಸಕ ಎಸ್.ಆರ್.ಶ್ರೀನಿವಾಸ್

ವರದಿ ಗುಬ್ಬಿ ಭರತ್



ಗುಬ್ಬಿ: ಕಾನೂನು ಸುವ್ಯವಸ್ಥೆಗೆ ಅತ್ಯಗತ್ಯ 280 ಸಿ ಸಿ ಕ್ಯಾಮೆರಾಗಳನ್ನು ಹೆಚ್‌ಎಎಲ್ ಘಟಕದ ಸ್ಥಳೀಯ ಅಭಿವೃದ್ಧಿ ಸಿ ಆರ್ ಫಂಡ್ ಮೂಲಕ ಖರೀದಿ ಮಾಡಲಾಗುತ್ತಿದೆ. ಎರಡು ತಿಂಗಳಲ್ಲಿ ಎಲ್ಲಾ ಪ್ರಮುಖ ರಸ್ತೆಗೆ ಗಡಿ ಭಾಗದಿಂದ ಕ್ಯಾಮೆರಾ ಅಳವಡಿಕೆ ಕಾರ್ಯ ನಡೆಯಲಿದೆ ಎಂದು ಶಾಸಕ ಎಸ್.ಆರ್.ಶ್ರೀನಿವಾಸ್ ತಿಳಿಸಿದರು.

ತಾಲ್ಲೂಕಿನ ಚೇಳೂರು ಹೋಬಳಿಯ ನಾಲ್ಕು ಗ್ರಾಮದಲ್ಲಿ ಸುಮಾರು 7 ಕೋಟಿ ರೂಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಅಪಘಾತ ವಲಯಗಳು ಹಾಗೂ ಜನಸಂದಣಿಯ ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಮೆರಾ ಅಳವಡಿಕೆ ಆಗಲಿದೆ. ಪೊಲೀಸ್ ಹಾಗೂ ಸ್ಥಳೀಯ ಸಂಸ್ಥೆಗಳು ಕ್ಯಾಮೆರಾ ನಿರ್ವಹಣೆ ನಡೆಸಬೇಕಿದೆ ಎಂದರು.

ಹೇಮಾವತಿ ಕುಡಿಯುವ ನೀರಿನ ಯೋಜನೆಯಲ್ಲಿ ಹಾಗಲವಾಡಿ ಕೆರೆಗೆ ನೀರು ಹರಿಯಲು ಶೇಕಡಾ 5 ರಷ್ಟು ಕೆಲಸ ಬಾಕಿ ಇದೆ. ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ. ಬಿಕ್ಕೇಗುಡ್ಡ ಯೋಜನೆ ಕಾಮಗಾರಿ ಆರಂಭವಾಗಿದೆ. ಅದು ಕೂಡ ಬಹುಬೇಗ ಪೂರ್ಣಗೊಳ್ಳಲಿದೆ ಎಂದ ಅವರು ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾವ ಪ್ರತಿಕ್ರಿಯೆ ನೀಡುವುದಿಲ್ಲ. ಏನೂ ಗೊತ್ತಿಲ್ಲದ ವಿಚಾರ ಮಾಧ್ಯಮ ಮುಂದೆ ಪ್ರಸ್ತಾಪ ಮಾಡುವ ಅಗತ್ಯವಿಲ್ಲ ಎಂದು ಪಕ್ಷದ ಶಿಸ್ತು ಬದ್ಧತೆ ಪ್ರದರ್ಶಿಸಿದರು.

ಅರಸೀಕೆರೆ ಶಾಸಕ ಶಿವಲಿಂಗೇಗೌಡ ಅವರ ಮಾತು ಆಕ್ರೋಶಕ್ಕೆ ಒಳಗಾಗಿತ್ತು. ಕೆಲ ಹೊಸ ಶಾಸಕರು ಅವರನ್ನು ರೊಚ್ಚಿಗೆಬ್ಬಿಸಿದ ಹಿನ್ನಲೆ ಆವೇಶದ ನುಡಿಗಳು ಬಂದಿವೆ. ಉದ್ದೇಶ ಪೂರ್ವಕವಾಗಿ ಮಾತನಾಡುವವರಲ್ಲ. ಅವರ ಬಾಯಿಂದ ಕೆಲ ಶಬ್ದಗಳು ಬರಬಾರದಿತ್ತು ಎಂದ ಅವರು ತಾಲ್ಲೂಕಿನಲ್ಲಿ 92 ಅಂಗನವಾಡಿ ಕಟ್ಟಡ ಕಾಮಗಾರಿ ಆರಂಭವಾಗಿದೆ. ಈ ಪೈಕಿ ಬಿದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂರು ಅಂಗನವಾಡಿ ಕಟ್ಟಡ ಕಾಮಗಾರಿ ಆರಂಭವಾಗಿದೆ ಎಂದರು.

ಎತ್ತಿನಹೊಳೆ ಯೋಜನೆಯ ಅನುದಾನದಲ್ಲಿ ವಿಶ್ವೇಶ್ವರಯ್ಯ ಜಲ ನಿಗಮದ ಸುಮಾರು 6.50 ಕೋಟಿ ಕಾಮಗಾರಿಗೆ ಚಾಲನೆ ನೀಡಲಾಯಿತು. ಮುತ್ತಯ್ಯನಹಟ್ಟಿ ರಸ್ತೆಗೆ 2 ಕೋಟಿ, ನಿಂಬೆಕಟ್ಟೆ ರಸ್ತೆಗೆ 2.20 ಕೋಟಿ, ಕಾಶೀಮಠ ಗ್ರಾಮದಲ್ಲಿ 2.15 ಕೋಟಿ ಹಾಗೂ ಸೆಣಬನಹಳ್ಳಿ ಗ್ರಾಮದಲ್ಲಿ 50 ಲಕ್ಷದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಧಿಕೃತ ಚಾಲನೆ ನೀಡಲಾಯಿತು ಎಂದ ಅವರು ಎತ್ತಿನಹೊಳೆ ಯೋಜನೆಯ ನೂರು ಕೋಟಿ ರೂಗಳ ರಸ್ತೆ ಕಾಮಗಾರಿಗಳು ಎರಡು ಹೋಬಳಿಯಲ್ಲಿ ನಡೆಯಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಯತೀಶ್, ಶಿವಾಜಿರಾವ್, ಯುವರಾಜ್ ಗುತ್ತಿಗೆದಾರರ ರಾಜು, ರವಿ ಇತರರು ಇದ್ದರು.

## ಸಿದ್ದಗಂಗಾ ಜಾತ್ರಾ ಮಹೋತ್ಸವ: ಬಹುಮಾನಕ್ಕಾಗಿ ಉತ್ತಮ ರಾಸುಗಳ ಆಯ್ಕೆ ಪ್ರಕ್ರಿಯೆ



ತುಮಕೂರು– ಐತಿಹಾಸಿಕ ಪ್ರಸಿದ್ಧ ಶ್ರೀ ಸಿದ್ದಗಂಗಾ ಮಠದಲ್ಲಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ದನಗಳ ಜಾತ್ರೆಯಲ್ಲಿ ಕೊಡ ಮಾಡುವ ಬಹುಮಾನಕ್ಕಾಗಿ ಉತ್ತಮ ರಾಸುಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ಕಳೆದ ಒಂದು ವಾರದಿಂದ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ದನಗಳ ಜಾತ್ರೆ ನಡೆಯುತ್ತಿದ್ದು, ಹಿರಿಯ ಶ್ರೀಗಳಾದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರು ನಡೆಸಿಕೊಂಡು ಬಂದಿರುವ ಉತ್ತಮ ರಾಸುಗಳಿಗೆ ಬಹುಮಾನ ನೀಡುವ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಉತ್ತಮ ರಾಸುಗಳ ಆಯ್ಕೆಗಾಗಿ ಪಶುಪಾಲನಾ ಇಲಾಖೆಯ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯಲ್ಲಿ ಪಶು ಇಲಾಖೆ ವೈದ್ಯರು, ಅನುಭವಿ ರೈತರು, ವರ್ತಕರು ಸೇರಿದಂತೆ 14 ಮಂದಿ ಸದಸ್ಯರುಗಳಿದ್ದಾರೆ.

ಸಿದ್ದಗಂಗಾ ಮಠದ ಆವರಣದಲ್ಲಿ ಈ ಆಯ್ಕೆ ಸಮಿತಿ ಪ್ರತಿ ವರ್ಷವೂ ಉತ್ತಮ ರಾಸುಗಳ ಆಯ್ಕೆ ಮಾಡುತ್ತಿದೆ. ಅದರಂತೆ ಈ ಬಾರಿಯೂ 90 ರಿಂದ 100 ರಾಸುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದವು.

ಪ್ರಶಸ್ತಿಗಾಗಿ ಹೋರಿಗಳು ಮತ್ತು ಎತ್ತುಗಳು ಎಂಬ ಎರಡು ವಿಭಾಗದಲ್ಲಿ ರಾಸುಗಳನ್ನು ಆಯ್ಕೆ ಮಾಡಲಾಗಿದ್ದು, ಹೋರಿಗಳ ವಿಭಾಗದಲ್ಲಿ ಹಾಲು ಹಲ್ಲು, 2 ಹಲ್ಲು, 4 ಹಲ್ಲು, 6 ಹಲ್ಲು ಹಾಗೂ ಬಾಯಿ ಕೂಡಿದ ಹೋರಿ ಹಾಗೂ ಎತ್ತುಗಳ ವಿಭಾಗದಲ್ಲೂ ಹಾಲು ಹಲ್ಲು, 2 ಹಲ್ಲು, 4 ಹಲ್ಲು, 6 ಹಲ್ಲು ಹಾಗೂ ಬಾಯಿ ಕೂಡಿದ ಎತ್ತುಗಳು ಮತ್ತು ಸಮಾಧಾನಕರ ಬಹುಮಾನ ನೀಡಲಾಗುತ್ತಿದೆ. ಈ ಎರಡು ವಿಭಾಗಗಳಲ್ಲೂ ಉತ್ತಮ ರಾಸುಗಳನ್ನು ಬಹುಮಾನಕ್ಕಾಗಿ ಆಯ್ಕೆ ಮಾಡಲಾಗಿದೆ ಎಂದು ಆಯ್ಕೆ ಸಮಿತಿಯ ಸದಸ್ಯರು ತಿಳಿಸಿದರು.

ಹೋರಿಗಳು ಮತ್ತು ಎತ್ತುಗಳ ವಿಭಾಗದಲ್ಲಿ ಮುಖ ಭಾವ, ಕೊಂಬು, ದೇಹ ಹಾಗೂ ಅವುಗಳ ನಡಿಗೆಯನ್ನು ಗಣನೆಗೆ ತೆಗೆದುಕೊಂಡು ಉತ್ತಮ ರಾಸುಗಳು ಎಂದು ಆಯ್ಕೆ ಮಾಡಲಾಯಿತು ಎಂದು ಹೇಳಿದರು.

## ಪ್ಯಾಸೆಂಜರ್ ವಹಿಕಲ್‌ಗಳಲ್ಲಿ ಲಗೇಜ್ : ಒಂದು ವಾಹನ ಲಗೇಜ್ ಸೀಜ್: ಚಾಲಕರಿಗೆ ಷೋಕಾಸ್ ನೋಟಿಸ್





ತುಮಕೂರು: ಪ್ಯಾಸೆಂಜರ್ ವಹಿಕಲ್‌ಗಳಲ್ಲಿ ಲಗೇಜ್ ಸಾಗಿಸುವುದು ಹೆಚ್ಚುತ್ತಿದ್ದು, ಬೆಂಕಿ ಮತ್ತಿತರ ಅವಘಡಗಳಿಗೆ ಕಾರಣವಾಗುತ್ತಿರುವ ಹಿನ್ನಲೆಯಲ್ಲಿ ತುಮಕೂರು ಮತ್ತು ನೆಲಮಂಗಲ ಆರ್.ಟಿ.ಓ ಕಚೇರಿಗಳಲ್ಲಿ ವ್ಯಾಪ್ತಿಯಲ್ಲಿ ವಿಶೇಷ ತಪಾಸಣೆ ನಡೆಸಿ, ಒಂದು ವಾಹನ ಸೀಜ್ ಮಾಡಿ, 45ಕ್ಕೂ ಹೆಚ್ಚು ವಹಿಕಲ್‌ಗಳಲ್ಲಿ ಇದ್ದ ಲಗೇಜ್ ಕೆಳಗೆ ಇಳಿಸಿ, ವಾಹನಗಳ ಮಾಲೀಕರು ಮತ್ತು ಚಾಲಕರಿಗೆ ಷೋಕಾಸ್ ನೋಟಿಸ್ ನೀಡಿದ್ದಾರೆ.

ಇತ್ತೀಚಗೆ ಪ್ಯಾಸೆಂಜರ್ ವಹಿಕಲ್‌ಗಳಲ್ಲಿ ಸರಕುಗಳನ್ನು ಸಾಗಾಣಿಕೆ ಮಾಡುವುದರಿಂದ ಅಕ್ಸಿಡೆಂಟ್ ನಂತಹ ಸಂದರ್ಭಗಳಲ್ಲಿ ವಾಹನಗಳಿಗೆ ಬೆಂಕಿ ಹತ್ತಿಕೊಂಡು ಹೊತ್ತಿ ಉರುಯುವ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆ ಮತ್ತು ವಾಹನಗಳ ಸುರಕ್ಷತೆ ಹಿನ್ನಲೆಯಲ್ಲಿ ಸಾರಿಗೆ ಇಲಾಖೆಯ ಬೆಂಗಳೂರು ಗ್ರಾಮಾಂತರ ಜಂಟಿ ಆಯುಕ್ತರು ಸುತ್ತೋಲೆಯೊಂದನ್ನು ಹೊರಡಿಸಿ, ತಮ್ಮ ವ್ಯಾಪ್ತಿಯಲ್ಲಿ ಸಂಚರಿಸುವ ಪ್ಯಾಸೆಂಜರ್ ವಹಿಕಲ್‌ಗಳನ್ನು ತಪಾಸಣೆಗೆ ಒಳಪಡಿಸುವಂತೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ತುಮಕೂರು ಕಚೇರಿ ವ್ಯಾಪ್ತಿಯ ದಾಬಸ್‌ಪೇಟೆ ಹಿರೇಹಳ್ಳಿ ಮದ್ಯ ತುಮಕೂರು ಪ್ರಾದೇಶಿಕ ಅಧೀಕ್ಷಕರಾದ ಎ.ವಿ.ಪ್ರಸಾದ್ ನೇತೃತ್ವ ಮತ್ತು ಹಿರಿಯ ಮೋಟಾರು ವಾಹನ ನಿರೀಕ್ಷಕರಾದ ಶದ್ರುಲ್ಲಾ ಷರಿಫ್ ಅವರ ಮೇಲು ಸ್ತುವಾರಿಯಲ್ಲಿ ನೆಲಮಂಗಲ ಆರ್.ಟಿ.ಓ ಕಚೇರಿಯ ಮೋಟಾರು ವಾಹನ ನಿರೀಕ್ಷಕಿ ಚಂದ್ರಕಲಾ, ಹಾಗೂ ತುಮಕೂರು ಆರ್.ಟಿ.ಓಕಚೇರಿಯ ಮೋಟಾರು ವಾಹನ ನಿರೀಕ್ಷಕರಾದ ಮಧುಸೂಧನ್ ಹಾಗೂ ಸಿಬ್ಬಂದಿಗಳು ವಿಶೇಷ ತಪಾಸಣಾ ಕಾರ್ಯ ನಡೆಸಿದರು.

ರಾತ್ರಿ ವೇಳೆ ಬೆಂಗಳೂರಿನಿಂದ ರಾಜ್ಯದ ಬೇರೆ ಬೇರೆ ಕಡೆಗಳಿಗೆ ಸಂಚರಿಸುವ ಪ್ಯಾಸೆಂಜರ್ ವಹಿಕಲ್‌ಗಳಲ್ಲಿ, ಅದರಲ್ಲಿಯೂ ಸ್ಲೀಪರ್ ಕೋಚ್ ವಾಹನಗಳಲ್ಲಿ ಅನಧೀಕೃತವಾಗಿ ವಾಹನದ ತಳಭಾಗದಲ್ಲಿ ಲಗೇಜ್ ತುಂಬುವುದರಿಂದ ಸಾಕಷ್ಟು ಹಾನಿ ಸಂಭವಿಸುತ್ತಿದೆ. ಈ ಬಗ್ಗೆ ಹಲವು ಬಾರಿ ವಾಹನಗಳನ್ನು ತಡೆದು, ದಂಡ ವಿಧಿಸಿ, ಎಚ್ಚರಿಕೆ ನೀಡಿದ್ದರೂ ಸಹ, ತಿದ್ದಿಕೊಳ್ಳದ ಹಿನ್ನೆಲೆಯಲ್ಲಿ ವಿಶೇಷ ತಪಾಸಣೆ ನಡೆಸುತಿದ್ದು,ಈ ವಿಶೇಷ ತಪಾಸಣೆ ವಾರದಲ್ಲಿ ಎರಡು ದಿನ ಇಡೀ ರಾಜ್ಯದಾದ್ಯಂತ ನಡೆಯಲಿದ್ದು, ಇದುವರೆಗೂ 45ಕ್ಕೂ ಹೆಚ್ಚು ವಾಹನಗಳ ಮಾಲೀಕರು ಮತ್ತುಚಾಲಕರಿಗೆ ಷೋಕಾಸ್ ನೋಟಿಷ್ ನೀಡಲಾಗಿದೆ. ಅಲ್ಲದೆಒಂದು ವಾಹನವನ್ನು ಸೀಜ್ ಮಾಡಿ, ಅದರಲ್ಲಿದ್ದ ಪ್ರಯಾಣಿಕರಿಗೆ ಬೇರೆ ವಾಹನದ ಮೂಲಕ ಬಿಜಾಪುರಕ್ಕೆ ಕಳುಹಿಸಲಾಗಿದೆ. ಒಂದು ವೇಳೆ ವಾಹನದ ಮಾಲೀಕರು ಮತ್ತು ಚಾಲಕರು ಇದೇ ರೀತಿ ಲಗೇಜ್ ತುಂಬಿಕೊಂಡು ಹೋಗುವುದು ಕಂಡು ಬಂದರೆ ವಾಹನದ ಆರ್.ಸಿ ರದ್ದು ಪಡಿಸುವುದರಲ್ಲದೆ, ಚಾಲಕನ ಚಾಲನಾ ಪರವಾನಗಿಯನ್ನುರದ್ದು ಪಡಿಸಲಾಗುವುದು ಎಂದು ಆರ್.ಟಿ.ಓ ಎ.ವಿ.ಪ್ರಸಾದ್ ಎಚ್ಚರಿಕೆ ನೀಡಿದರು.

ವಾಹನಗಳ ತಪಾಸಣೆಯ ವೇಳೆ ಲೋಡ್‌ಗಟ್ಟಲೆ ಲಗೇಜ್ ಇರುವುದನ್ನು ಕಂಡ ಪ್ರಯಾಣಿಕರು ಬಸ್ಸ್ ಚಾಲಕರು ಮತ್ತು ನಿರ್ವಾಹಕರನ್ನು ತರಾಟೆಗೆ ತೆಗೆದು ಕೊಂಡಿದ್ದು, ನಾವುಗಳು ಹೆಚ್ಚುವರಿಯಾಗಿ ಲಗೇಜ್‌ತಂದರೆ ಬಾಯಿಗೆ ಬಂದಂತೆ ಮಾತನಾಡುವ ಖಾಸಗಿ ಬಸ್‌ಗಳ ಚಾಲಕರು ಮತ್ತು ವಾಹನದ ಮಾಲೀಕರು, ಪ್ರಯಾಣಿಕರಿಗೆಗೊತ್ತಿಲ್ಲದಂತೆ ಲೋಡ್‌ಗಟ್ಟಲೆ ಲಗೇಜ್ ಸಾಗಿಸುತ್ತಿದ್ದಾರೆ. ಇದು ಸರಿಯಲ್ಲ. ಇತ್ತೀಚಗೆ ಪ್ರಯಾಣಿಕರ ವಾಹನ, ಅದರಲ್ಲಿಯೂ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಅವಘಡ ಸಂಭವಿಸಲು ಇದುವೆಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕೆಲ ಪ್ರಯಾಣಿಕರು, ಚಾಲಕರ ಬಳಿ ಮಾಲೀಕರ ಮೊಬಲ್ ನಂಬರ್ ಪಡೆದು ,ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದು ಕಂಡುಬಂತು.

# ವೇಗದ ಜೀವನ, ಸಮಯಕ್ಕೆ ಸರಿಯಾಗಿ ತಿನ್ನದಿರುವುದು, ಅಜೀರ್ಣಕ್ಕೆ ಕಾರಣವಾಗಬಹುದು






ಆಹಾರ ಪದ್ಧತಿಯಲ್ಲಿ ಮಾಡಿಕೊಂಡಿರುವ ಬದಲಾವಣೆಗಳು ಅಜೀರ್ಣಕ್ಕೆ ಕಾರಣವಾಗುತ್ತಿದೆ. ಈ ಸಮಸ್ಯೆ ದೀರ್ಘಕಾಲದವರೆಗೆ ಮುಂದುವರಿದರೆ, ಅದು ಹಸಿವು ಕಡಿಮೆಯಾಗುವುದಕ್ಕೆ ಮತ್ತು ದೇಹದಲ್ಲಿ ದೌರ್ಬಲ್ಯಕ್ಕೆ ಕಾರಣವಾಗಬಹುದು. ಹಾಗಾಗಿ ಈ ರೀತಿಯ ಲಕ್ಷಣ ಕಂಡುಬಂದಾಗ ಅದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಹಾಗಾದರೆ ಯಾವ ರೀತಿಯ ಆಹಾರಗಳು ಅಜೀರ್ಣಕ್ಕೆ ಕಾರಣವಾಗಬಹುದು, ಈ ರೀತಿಯ ಸಮಸ್ಯೆ ತಡೆಯಲು ಏನು ಮಾಡಬಹುದು

ಇತ್ತೀಚಿನ ದಿನಗಳಲ್ಲಿ, ಅನೇಕರಲ್ಲಿ ಕಂಡುಬರುತ್ತಿರುವ ಹೆಚ್ಚಿನ ಆರೋಗ್ಯ ಸಮಸ್ಯೆಗಳಲ್ಲಿ ಅಜೀರ್ಣವು ಒಂದು. ವೇಗದ ಜೀವನ, ಸಮಯಕ್ಕೆ ಸರಿಯಾಗಿ ತಿನ್ನದಿರುವುದು, ಹೆಚ್ಚು ಹುರಿದ ಮತ್ತು ಕರಿದ ಆಹಾರಗಳ ಸೇವನೆಯಿಂದ ಅಜೀರ್ಣ ಉಂಟಾಗುತ್ತದೆ. ಇದು ಜೀರ್ಣಾಂಗ ವ್ಯವಸ್ಥೆಯು ಆಹಾರವನ್ನು ಸರಿಯಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗದ ಸ್ಥಿತಿಯಾಗಿದೆ. ಇದರಿಂದ ಹೊಟ್ಟೆಯಲ್ಲಿ ಭಾರವಾದ ಭಾವನೆ, ಅನಿಲ, ಸುಡುವ ಸಂವೇದನೆ, ಉಬ್ಬುವುದು ಮತ್ತು ಅಸ್ವಸ್ಥತೆ ಕಂಡುಬರಬಹುದು. ಕೆಲವೊಮ್ಮೆ, ತಿಂದ ನಂತರ, ಹೊಟ್ಟೆ ನೋವು (ಖಣಂಟಚಿಛಿ ಕಚಿಟಿ), ವಾಕರಿಕೆ ಅಥವಾ ಎದೆಯಲ್ಲಿ ಸುಡುವ ಸಂವೇದನೆ ಕೂಡ ಅನುಭವಕ್ಕೆ ಬರಬಹುದು. ಆದರೆ ಈ ಸಮಸ್ಯೆ ದೀರ್ಘಕಾಲದವರೆಗೆ ಮುಂದುವರಿದರೆ, ಅದು ಹಸಿವು ಕಡಿಮೆಯಾಗುವುದಕ್ಕೆ ಮತ್ತು ದೇಹದಲ್ಲಿ ದೌರ್ಬಲ್ಯಕ್ಕೆ ಕಾರಣವಾಗಬಹುದು. ಹಾಗಾಗಿ ಈ ರೀತಿಯ ಲಕ್ಷಣ ಕಂಡುಬಂದಾಗ ಅದನ್ನು ಲಘುವಾಗಿ ತೆಗೆದುಕೊಳ್ಳಬಾರದು. ಹಾಗಾದರೆ ಯಾವ ರೀತಿಯ ಆಹಾರಗಳು ಅಜೀರ್ಣಕ್ಕೆ ಕಾರಣವಾಗಬಹುದು, ಈ ರೀತಿಯ ಸಮಸ್ಯೆ ತಡೆಯಲು ಏನು ಮಾಡಬಹುದು ತಿಳಿದುಕೊಳ್ಳಿ.

### ಯಾವ ರೀತಿಯ ಆಹಾರಗಳು ಅಜೀರ್ಣಕ್ಕೆ ಕಾರಣವಾಗುತ್ತವೆ?

ಆರ್‌ಎಂಎಲ್ ಆಸ್ಪತ್ರೆಯ ವೈದ್ಯಕೀಯ ವಿಭಾಗದ ನಿರ್ದೇಶಕರಾದ ಪ್ರೊಫೆಸರ್ ಡಾ. ಸುಭಾಷ್ ಗಿರಿ ಅವರು ಹೇಳುವ ಪ್ರಕಾರ, ಹುರಿದ ಮತ್ತು ಹೆಚ್ಚು ಮಸಾಲೆಯುಕ್ತ ಆಹಾರಗಳು ಅಜೀರ್ಣಕ್ಕೆ ಪ್ರಮುಖ ಕಾರಣ. ಜೊತೆಗೆ ಫಾಸ್ಟ್ ಫುಡ್, ಜಂಕ್ ಫುಡ್ ಮತ್ತು ಹೆಚ್ಚಿನ ಎಣ್ಣೆಯಲ್ಲಿ ಬೇಯಿಸಿದ ಆಹಾರಗಳು ಕೂಡ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತದೆ. ಅತಿಯಾದ ಸಿಹಿತಿಂಡಿ, ತಂಪು ಪಾನೀಯ ಮತ್ತು ಕೆಫೀನ್ ಹೊಂದಿರುವ ಪಾನೀಯಗಳು ಸಹ ಜೀರ್ಣಕ್ರಿಯೆಯನ್ನು ಅಡ್ಡಿಪಡಿಸಬಹುದು. ಅಷ್ಟೇ ಅಲ್ಲ ತಡರಾತ್ರಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಊಟ ಮಾಡುವುದರಿಂದ ಹೊಟ್ಟೆಗೆ ವಿಶ್ರಾಂತಿ ಸಿಗದಿರಬಹುದು, ಇದು ಕೂಡ ಅಜೀರ್ಣ ಸಮಸ್ಯೆಗಳನ್ನು ಹೆಚ್ಚಿಸಬಹುದು. ಅತಿಯಾದ ಮಸಾಲೆ, ಸಂಸ್ಕರಿಸಿದ ಆಹಾರಗಳು ಮತ್ತು ಪ್ಯಾಕ್ ಮಾಡಿದ ತಿಂಡಿಗಳು ಸಹ ಅನಿಲ ಮತ್ತು ಆಮ್ಲೀಯತೆಯನ್ನು ಉಂಟುಮಾಡುತ್ತವೆ. ಕೆಲವರಿಗೆ ಹಾಲು ಅಥವಾ ಡೈರಿ ಉತ್ಪನ್ನಗಳ ಸೇವನೆ ಮಾಡುವುದರಿಂದಲೂ ಕೂಡ ಅಜೀರ್ಣವಾಗಬಹುದು.

### ಅಜೀರ್ಣದಂತಹ ಸಮಸ್ಯೆಗಳನ್ನು ತಡೆಯುವುದು ಹೇಗೆ?

ಸಾಮಾನ್ಯವಾಗಿ ಅಜೀರ್ಣವಾಗದಂತೆ ತಡೆಯಲು, ಹಗುರವಾದ ಮತ್ತು ಸಮತೋಲಿತ ಆಹಾರ ಸೇವನೆ ಮಾಡಿ. ಸಮಯಕ್ಕೆ ಸರಿಯಾಗಿ ತಿನ್ನುವುದರ ಮೂಲಕ ದೀರ್ಘಕಾಲದ ವರೆಗೆ ಹಸಿವಿನಿಂದ ಇರುವುದನ್ನು ತಪ್ಪಿಸಿ. ಕರಿದ ಮತ್ತು ಜಂಕ್ ಆಹಾರಗಳಿಂದ ದೂರವಿರಿ. ಆಹಾರವನ್ನು ಚೆನ್ನಾಗಿ ಅಗಿಯಿರಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ನೀರು ಕುಡಿಯಿರಿ. ಪ್ರತಿದಿನ ಬಿಡುವಿದ್ದಾಗ ಸ್ವಲ್ಪ ಸಮಯ ನಡೆಯುವುದು ಅಥವಾ ಲಘು ವ್ಯಾಯಾಮ ಮಾಡುವುದು ಜೀರ್ಣಕ್ರಿಯೆಗೆ ಪ್ರಯೋಜನಕಾರಿ. ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸಿ ಮತ್ತು ತಡರಾತ್ರಿಯಲ್ಲಿ ಆಹಾರ ಸೇವನೆ ಮಾಡುವುದನ್ನು ತಪ್ಪಿಸಿ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಜೀವ ನುಂಗಿದ ಗ್ರಾಮೀಣ ಸಾಂಸ್ಕೃತಿಕ ಆಟ.... ಈ ಗಾಳಿಪಟ... ಇದಕ್ಕೆ ಬೇಕಾ ಕಾನೂನು..?





ನನ್ನ ಹಳೆಯ ದ್ವಿಚಕ್ರವಾಹನದಲ್ಲಿ ಹೆಲ್ಮೆಟ್ ಹಾಕಿಕೊಂಡೇ ಮಗಳನ್ನು ಕರೆತರಲು ಹೋಗುತ್ತಿದ್ದೆ. ಇನ್ನೇನು ಸ್ವಲ್ಪವೇ ದೂರದಲ್ಲಿತ್ತು ನಾನು ತಲುಪಬೇಕಾಗಿದ್ದ ಸ್ಥಳ.

ಇದ್ದಕ್ಕಿದ್ದಂತೆ ಕತ್ತಿನ ಬಳಿ ಏನೋ ಚುಚ್ಚಿದಂತಾಯಿತು. ನಿಧಾನವಾಗಿ ಗಾಡಿ ನಿಲ್ಲಿಸಬೇಕೆಂದು ಬ್ರೇಕ್ ಹಾಕಿದೆ. ತಕ್ಷಣ ರಕ್ತ ರಸ್ತೆಗೆ ಚಿಮ್ಮಿತು. ಬಟ್ಟೆಯ ಮೇಲೆಲ್ಲಾ ರಕ್ತ ಸುರಿಯುತ್ತಿತ್ತು. ಅದನ್ನು ನೋಡಿ ಭಯ ಮತ್ತು ಗಾಬರಿ ಒಟ್ಟಿಗೆ ಆಯಿತು. ಕತ್ತು ಸರಿಯಾಗಿ ನಿಲ್ಲುತ್ತಿಲ್ಲ, ಒಂದು ಕಡೆ ವಾಲುತ್ತಿದೆ. ಅಯ್ಯೋ ಇದೇನಾಯಿತು ಎಂದು ಜೋರಾಗಿ ಕೂಗಿದೆ. ಯಾರು ನನ್ನತ್ತ ನೋಡುತ್ತಿಲ್ಲ. ಏಕೆಂದರೆ ನನ್ನ ಧ್ವನಿ ಹೊರಗೆ ಹೊರಡುತ್ತಲೇ ಇಲ್ಲ. ಗಂಟಲು ಬಿದ್ದು ಹೋಗಿದೆ. ಶಬ್ದ ಅವರಿಗೆ ಕೇಳಿಸುತ್ತಲೇ ಇಲ್ಲ. ತಲೆ ಸುತ್ತಿ ಬಂದಂತಾಯಿತು. ಕಣ್ಣು ಮಂಜಾಯಿತು. ಉಸಿರು ನಿಂತಂತಾಯಿತು. ಕೆಳಕ್ಕೆ ಬೀಳತೊಡಗಿದೆ. ಈಗ ಜನ ನನ್ನತ್ತ ಬರತೊಡಗಿದರು. ಮನೆಗೆ ವಿಷಯ ತಿಳಿಸಲು ಜೇಬಿನಲ್ಲಿದ್ದ ಮೊಬೈಲ್ ಗೆ ಕೈ ಹಾಕಿದೆ, ಸಿಗುತ್ತಿಲ್ಲ. ದಿಢೀರನೆ ರಸ್ತೆಯ ಕಲ್ಲಿನ ಮೇಲೆ ಬಿದ್ದೆ. ಮುಂದೇನಾಯಿತೋ ನನಗೆ ಗೊತ್ತಿಲ್ಲ. ಬಹುಶಃ ನಿಮಗೆ ಇಷ್ಟು ಹೊತ್ತಿಗೆ ಗೊತ್ತಾಗಿರಬಹುದು. ನನ್ನ ಪ್ರಾಣಪಕ್ಷಿ ಹಾರಿ
ಹೋಗಿರಬಹುದು ಎಂದು ಭಾವಿಸುತ್ತೇನೆ. ಮಾಂಝಾದಾರ ನನ್ನ ಜೀವ ನುಂಗಿತು......

ನಾನು ಶ್ರೀಧರ ನಾಯಕ. ಒಂದು ಅಕ್ಕಿ ಗಿರಣಿಯಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ 18000 ರೂಪಾಯಿಯ ಸಂಬಳ. ಒಂದು ಸಣ್ಣ ಬಾಡಿಗೆ ಮನೆಯಲ್ಲಿ ವಾಸ. ಹೆಂಡತಿ ಮತ್ತು ಪಿಯುಸಿ ಓದುತ್ತಿರುವ ನನ್ನ ಮುದ್ದಿನ ಮಗಳೊಂದಿಗೆ ಆರಾಮಾಗಿ ಇದ್ದೆ. ಬದುಕಿನ ಏಳುಬೀಳುಗಳ ನಡುವೆ ಹೇಗೋ ಜೀವನ ಸಾಗುತ್ತಿತ್ತು. ನನ್ನ ಪತ್ನಿಯೂ ಪರಿಸ್ಥಿತಿ ಅರಿತು ಹೊಂದಾಣಿಕೆ ಮಾಡಿಕೊಂಡು ತುಂಬಾ ಒಳ್ಳೆಯ ಜೀವನ ಸಂಗಾತಿಯಾಗಿದ್ದಳು.

ನನ್ನ ಮಗಳು ಈ ಬಾರಿ ವಿಜ್ಞಾನ ವಿಷಯದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದಾಳೆ. ಚಿಕ್ಕ ಮಗುವಾಗಿದ್ದಾಗಿನಿಂದಲೂ ಅತ್ಯಂತ ಬುದ್ಧಿವಂತೆ. ತಾನು ಓದಿದ ಎಲ್ಲಾ ಶಾಲಾ ತರಗತಿಗಳಲ್ಲೂ ಈಕೆಗೇ ಮೊದಲ ಸ್ಥಾನ. ಅವಳಿಗೆ ಡಾಕ್ಟರ್ ಆಗಬೇಕೆಂಬ ಬಹುದೊಡ್ಡ ಕನಸಿದೆ. ನಾವಂತೂ ಕಡುಬಡವರು. ಸರ್ಕಾರಿ ಶಾಲೆಯಲ್ಲಿ ಓದಿ ಮುಂದೆ ಸರ್ಕಾರಿ ಕೋಟಾದಲ್ಲಿಯೇ ಮೆಡಿಕಲ್ ಸೀಟು ಸಿಕ್ಕಿದರೆ ಹೇಗೋ ಬ್ಯಾಂಕಿನ ಹಣಕಾಸು ನೆರವು ಪಡೆದು ಡಾಕ್ಟರ್ ಓದಬೇಕೆಂದು ಆಸೆಪಟ್ಟಿದ್ದಾಳೆ.

ನೀಟ್ ಪರೀಕ್ಷೆಯ ತರಬೇತಿಗಾಗಿ ನಮ್ಮ ಮನೆಯಿಂದ ಐದು ಕಿಲೋಮೀಟರ್ ದೂರದ ತಾಲ್ಲೂಕು ಮುಖ್ಯ ಕೇಂದ್ರದಲ್ಲಿ ಉಚಿತ ತರಬೇತಿ ಪಡೆಯುತ್ತಿದ್ದಾಳೆ.

ಇವತ್ತು ಭಾನುವಾರ, ಆ ಉಚಿತ ನೀಟ್ ತರಬೇತಿ ಬೆಳಗ್ಗೆ 8 ಗಂಟೆಯಿಂದ 11 ಗಂಟೆಯವರೆಗೆ ಇತ್ತು. ಆಕೆ ಬೆಳಗ್ಗೆ ನಡೆದೇ ಹೋಗಿದ್ದಳು. ಈಗ ನಾನು ಆಕೆಯನ್ನು ಕರೆದುಕೊಂಡು ಬರಲು ನನ್ನ ಹಳೆಯ ಸ್ಕೂಟರಿನಲ್ಲಿ ಹೋಗುತ್ತಿದ್ದೆ. ಇವತ್ತು ಇನ್ನೊಂದು ವಿಶೇಷವಿದೆ. ಇಂದು ನನ್ನ ಮುದ್ದಿನ ಮಗಳ ಹುಟ್ಟುಹಬ್ಬ. ಆಕೆ ಸುಮಾರು ಎರಡು ವರ್ಷದಿಂದ ನನ್ನನ್ನು ಒಂದು ಒಳ್ಳೆಯ ಮೊಬೈಲ್ಗಾಗಿ ಕಾಡಿ ಬೇಡುತ್ತಿದ್ದಳು. ಬಡವನಾದ ನನಗೆ ಉತ್ತಮ ಗುಣಮಟ್ಟದ ಮೊಬೈಲ್ ಕೊಡಿಸಲು ಸಾಧ್ಯವಾಗಿರಲಿಲ್ಲ. ಆದರೆ ಈಗ ಆಕೆ ಮೆಡಿಕಲ್ ಪ್ರವೇಶ ಪರೀಕ್ಷೆ ಓದಲು ಸಿದ್ಧತೆ ಮಾಡಿಕೊಳ್ಳುತ್ತಿರುವುದರಿಂದ ಒಂದು ಒಳ್ಳೆಯ ಸ್ಮಾರ್ಟ್ ಫೋನ್ ಕೊಡಿಸಬೇಕೆಂದು ಆಗೋ ಹೀಗೋ ಕೂಡಿಟ್ಟ ಹಣವನ್ನು, ಜೊತೆಗೆ ನನ್ನ ಪತ್ನಿಯ ಉಳಿತಾಯದ ಹಣವನ್ನೂ ಎಲ್ಲ ಸೇರಿಸಿ ಸುಮಾರು 20000 ರೂಪಾಯಿ ಬೆಲೆಯ ಮೊಬೈಲ್ ಕೊಡಿಸಲು ನಿರ್ಧರಿಸಿದೆ.

ಅವಳಿಗೆ ಒಂದು ರೀತಿ ಸರ್ಪ್ರೈಸ್ ಇರಲೆಂದು ಮೊದಲೇ ಆಕೆಗೆ ಹೇಳದೆ ಆಕೆಯನ್ನು ಟ್ಯೂಷನ್ ನಿಂದ ನೇರವಾಗಿ ಮೊಬೈಲ್ ಅಂಗಡಿಗೆ ಕರೆದುಕೊಂಡು ಹೋಗಿ ಕೊಡಿಸುವ ಉತ್ಸಾಹದಲ್ಲಿ ಆ ಕಡೆ ಹೋಗುತ್ತಿದ್ದೆ. ಆದರೆ ದುರಾದೃಷ್ಟ ನನ್ನದೋ, ಮಗಳದೋ, ನನ್ನ ಪತ್ನಿಯದೋ ಅರ್ಥವಾಗುತ್ತಿಲ್ಲ. ನಾನಂತೂ ಈ ಭೂಮಿಯಿಂದ ಹೊರಟೆ. ನನ್ನ ಬರುವಿಕೆಗೆ ಅಲ್ಲಿ ಮಗಳು ಕಾಯುತ್ತಿದ್ದರೆ, ಮನೆಯಲ್ಲಿ ಹೆಂಡತಿ ಕಾಯುತ್ತಿದ್ದಾಳೆ, ನಾನಂತೂ ಬರುವುದಿಲ್ಲ. ನೀವೇ ವಿಷಯ ಮುಟ್ಟಿಸಬೇಕು. ಮುಂದೆ ಏನಾಗುತ್ತೋ ನಿಮಗೆ ಅರ್ಥವಾಗಬಹುದು.

ಗಾಳಿಪಟ ಹಾರಿಸುವುದು ಒಂದು ಗ್ರಾಮೀಣ ಸಾಂಸ್ಕೃತಿಕ ಆಟ. ಈ ಆಟ ಈ ವರ್ಷ ನಮ್ಮ ದೇಶದಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಜನರನ್ನು ಬಲಿ ಪಡೆದರೆ, ಮತ್ತೆ ಕೆಲವರು ತೀವ್ರ ಸ್ವರೂಪದ ಗಾಯಾಳುಗಳಾಗಿದ್ದಾರೆ. ದೇಶದ ಜನಸಂಖ್ಯೆಗೆ ಹೋಲಿಸಿದರೆ ಈ ಸಾವುಗಳು ಕಡಿಮೆಯೇ ಇರಬಹುದು. ಆದರೆ ಈ ಸಾವುಗಳು ಮಾತ್ರ ತೀರಾ ಅನಾವಶ್ಯಕ, ಬೇಜವಾಬ್ದಾರಿ ನಡೆಯಿಂದ ಆಗುತ್ತಿದೆ ಮತ್ತು ಇದನ್ನು ನಿರ್ಲಕ್ಷಿಸಿದರೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಹೆಚ್ಚಾಗಬಹುದು.

ಸರ್ಕಾರಗಳು ಕೂಡಲೇ ಎಚ್ಚೆತ್ತುಕೊಂಡು ಗಾಳಿಪಟ ಹಾರಿಸುವಾಗ ಈ ಆಟಕ್ಕೆ ನೀತಿ ನಿಯಮಗಳನ್ನು ರೂಪಿಸಲೇಬೇಕಿದೆ. ಮುಖ್ಯವಾಗಿ ಒಂದು ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ಮಾತ್ರ ಗಾಳಿಪಟ ಹಾರಿಸುವಂತಿರಬೇಕು. ಹೆಚ್ಚಾಗಿ ಬಯಲು ಪ್ರದೇಶದಲ್ಲಿಯೇ ಗಾಳಿಪಟ ಹಾರಿಸಬೇಕು. ಜನವಸತಿ ಪ್ರದೇಶದಲ್ಲಿ, ರಸ್ತೆ ಬದಿಯಲ್ಲಿ ಅದನ್ನು ಸಂಪೂರ್ಣ ನಿಷೇಧಿಸಬೇಕು. ಮನೆಯ ಮಹಡಿಯ ಮೇಲೆಯೂ ಹಾರಿಸಬಾರದು.

ಅದಕ್ಕೆ ಉಪಯೋಗಿಸುವ ದಾರವನ್ನು, ಅದರ ಗುಣಮಟ್ಟವನ್ನು ಅಪಾಯಕಾರಿ ಇಲ್ಲದಂತೆ ನೋಡಿಕೊಳ್ಳಬೇಕು. ವರ್ಷದ ಎಲ್ಲಾ ಕಾಲವೂ ಹಾರಿಸಲು ನಿಷೇಧ ಸೇರಿ ಕೆಲುವು ಸಂದರ್ಭದಲ್ಲಿ ಮಾತ್ರ ಅನುಮತಿ ನೀಡಬೇಕು. ವಿದ್ಯುತ್ ಕಂಬಗಳ ಬಳಿ, ಜನನಿಬಿಡ ಪ್ರದೇಶದಲ್ಲಿ ಸಂಪೂರ್ಣ ನಿಷೇಧ ಇರಬೇಕು. ಗಾಳಿಪಟಗಳ ಗುಣಮಟ್ಟವನ್ನೂ
ಪರೀಕ್ಷಿಸಬೇಕು. ಚಿಕ್ಕ ಮಕ್ಕಳಿಗೆ ಅನುಮತಿ ನೀಡಲೇಬಾರದು. ಗಾಳಿಪಟ ಸ್ಪರ್ಧೆ ಅಥವಾ ಗುಂಪು ಹಾರಿಸುವಿಕೆಯಲ್ಲಿ ಪೊಲೀಸರ ಅನುಮತಿ ಪಡೆಯಲೇಬೇಕು. ಮಧ್ಯದಲ್ಲಿಯೇ ತುಂಡಾದ ಅಥವಾ ಹರಿದ ಗಾಳಿಪಟವನ್ನು ಸಂಗ್ರಹಿಸಿ ಅದನ್ನು ನಾಶಪಡಿಸಬೇಕು. ರಸ್ತೆ ಬದಿ ಯಾವುದೇ ಕಾರಣಕ್ಕೂ ಗಾಳಿಪಟ ಹಾರಿಸುವಂತಿಲ್ಲ. ಇದಲ್ಲದೆ ಇನ್ನೂ ಪರಿಣಿತರೊಂದಿಗೆ ಚರ್ಚಿಸಿ ಗಾಳಿಪಟದಿಂದ ಆಗುತ್ತಿರುವ ಅಥವಾ ಮಂಜಾದಾರದಿಂದ ಆಗುತ್ತಿರುವ ಅನಾಹುತಗಳನ್ನು ತಪ್ಪಿಸಬೇಕು. ಇಲ್ಲದಿದ್ದರೆ ತುಂಬಾ ಅನಾಹುತವಾಗಬಹುದು. ದಯವಿಟ್ಟು ಈ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಬಲಗೊಳ್ಳುವಂತೆ ಮತ್ತು ಸರ್ಕಾರದ ಗಮನ ಸೆಳೆಯುವಂತೆ ಜಾಗೃತಿ ಮೂಡಿಸೋಣ.

# ಮೆಟ್ರೋ ಬೆಲೆ ಏರಿಕೆ : ಟಿಕೆಟ್ ದರ ನಿಗದಿ ಮತ್ತು ದರ ಹೆಚ್ಚಳಕ್ಕೆ ಯಾರು ಜವಾಬ್ದಾರರು?

ಎರಡೂ ರಾಜಕೀಯ ಪಕ್ಷಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕಾರ್ಯಾಂಗದ ಬುದ್ದಿವಂತ ಅಧಿಕಾರಿಗಳು ಇವರೆಲ್ಲರ ಮುಖವಾಡಗಳು ಮೆಟ್ರೋ ಬೆಲೆ ಏರಿಕೆ ವಿಷಯದಲ್ಲಿ ಬಯಲಾಗುತ್ತಿವೆ.

ಒಬ್ಬ ಭಾರತೀಯ ಪ್ರಜೆಯೇ ಕೇಂದ್ರ ಸರ್ಕಾರಕ್ಕೂ ಮತ ಹಾಕುವುದು, ರಾಜ್ಯ ಸರ್ಕಾರಕ್ಕೂ ಮತ ಹಾಕುವುದು ಅಥವಾ ಯಾವುದೇ ಸ್ಥಳೀಯ ಸಂಸ್ಥೆಗಳಿಗೂ ಅವರೇ ಮತ ಹಾಕಿ ಚುನಾಯಿಸಿರುತ್ತಾರೆ. ಕೇಂದ್ರ, ರಾಜ್ಯ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಇದೆಲ್ಲವೂ ಆಡಳಿತಾತ್ಮಕ ಅನುಕೂಲಕ್ಕಾಗಿ ಮಾಡಿಕೊಂಡ ವ್ಯವಸ್ಥೆಗಳೇ ಹೊರತು ಇವು ವಿದೇಶಿ ಸಂಸ್ಥೆಗಳಲ್ಲ. ಈ ಎಲ್ಲಕ್ಕೂ ಹಣ ನೀಡುತ್ತಿರುವುದು ಸಾರ್ವಜನಿಕ ತೆರಿಗೆ ಮೂಲಕವೇ. ಹಾಗೆಂದ ಮೇಲೆ ಬೆಲೆ ಏರಿಕೆ ಎಲ್ಲರಿಗೂ ಸಂಬಂಧ ಪಟ್ಟದ್ದು. ಈ ರಾಜಕಾರಣಿಗಳು ನಿಮ್ಮಿಂದ ಬೆಲೆ ಏರಿಕೆ, ನಿಮ್ಮಿಂದ ಬೆಲೆ ಏರಿಕೆ ಎಂದು ಒಬ್ಬರಿಗೊಬ್ಬರು ಆರೋಪ ಮಾಡಿಕೊಳ್ಳುತ್ತಾ ಜನರನ್ನು ಮೂರ್ಖರಾಗಿಸುವುದು, ಲಕ್ಷಾಂತರ ಸಂಬಳ ಪಡೆಯುವ ಅಧಿಕಾರಿಗಳು ಮೌನವಾಗಿರುವುದು ತುಂಬಾ ನಾಚಿಕೆಗೇಡಿನ ವಿಷಯ ಮತ್ತು ಒಂದು ಸಣ್ಣ ಸಮಸ್ಯೆಯನ್ನು ಬಗೆಹರಿಸಲಾಗದೆ ಹಾದಿ ರಂಪ, ಬೀದಿ ರಂಪ ಮಾಡಿಕೊಳ್ಳುವ ಇವರು ಸಾಮಾನ್ಯ ಜನರ ಜಗಳಗಳಿಗೆ ನೈತಿಕವಾಗಿ ಯಾವ ರೀತಿ ಉತ್ತರ ಕೊಡುತ್ತಾರೆ.

ಮೆಟ್ರೋ ಬೆಲೆ ಏರಿಕೆಗೆ ಕೇಂದ್ರ ಕಾರಣ ಎಂದು ಕೆಲವರು, ರಾಜ್ಯ ಕಾರಣ ಎಂದು ಕೆಲವರು ಹೇಳುವುದಾದರೆ ಇಬ್ಬರಲ್ಲಿ ಯಾರೋ ಒಬ್ಬರು ಸುಳ್ಳು ಹೇಳುತ್ತಿದ್ದಾರೆ ಎಂದಾಗುತ್ತದೆ. ಆ ಸುಳ್ಳು ಹೇಳುತ್ತಿರುವವರು ಯಾರು ಎಂಬುದಾದರೂ ಜನರಿಗೆ ಗೊತ್ತಾಗಬೇಕಲ್ಲವೇ. ಇದು ಒಂದು ರೀತಿ ವಿಚಿತ್ರ ನಡವಳಿಕೆ. ಜೊತೆಗೆ ಬೆಲೆ ಏರಿಕೆ ಅನಿವಾರ್ಯ ಎನ್ನುವುದಾದರೆ ಎರಡು ಸರ್ಕಾರಗಳಿಗೆ ಅದನ್ನು ಸಮರ್ಥಿಸುವ ಧೈರ್ಯವೂ ಇಲ್ಲ ಅಥವಾ ಸಾರಿಗೆ ಎಂಬುದು ಒಂದು ಲಾಭದಾಯಕ ಉದ್ದಿಮೆಯಲ್ಲ, ಅದೊಂದು ಸಾರ್ವಜನಿಕ ಅನಿವಾರ್ಯ ಸಂಪರ್ಕ ಸೇತುವೆ. ಆದ್ದರಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅನೇಕ ಲಾಭಗಳಿವೆ. ಅದನ್ನು ಕಡಿಮೆ ಬೆಲೆಯಲ್ಲಿ ಮುಂದುವರಿಸಿಕೊಂಡು ಹೋಗುವುದು ಉತ್ತಮ ಎನ್ನುವ ನಿರ್ಧಾರವನ್ನಾದರೂ ಮಾಡಬೇಕಲ್ಲವೇ ಅಥವಾ ಬೆಲೆ ಏರಿಕೆ ಹೊರತುಪಡಿಸಿ ವಿವಿಧ ಆದಾಯದ ಮೂಲಗಳನ್ನು ಪತ್ತೆ ಹಚ್ಚಬೇಕಲ್ಲವೇ.

ಇದ್ಯಾವುದನ್ನು ಮಾಡದೆ ಹಾದಿ ಬೀದಿ ರಂಪಾಟ ಮಾಡುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ರಾಜಕಾರಣಿಗಳು, ಅಧಿಕಾರಿಗಳು ಸಾರ್ವಜನಿಕ ಛೀಮಾರಿಗೆ ಅರ್ಹರು.

ಇತ್ತೀಚೆಗೆ ತೆರಿಗೆ ಅಧಿಕಾರಿಗಳಿಂದ ಟಿವಿಗಳಲ್ಲಿ ಒಂದು ಜಾಹೀರಾತು ಪ್ರಕಟವಾಗುತ್ತದೆ, " ನಾನು ಮೂರ್ಖ ಅಲ್ಲ " ಬಹುಶಃ ಅದು ರಾಜಕಾರಣಿ, ಅಧಿಕಾರಿಗಳಿಗೆ ನಾವು ಹೇಳಬೇಕಾದ ಮಾತು.

ಈ ಬಗ್ಗೆ ಕೃತಕ ಬುದ್ಧಿಮತ್ತೆ ಬಳಿ ಕೇಳಿದಾಗ ಅದು ನೀಡಿದ ಉತ್ತರ......

ನಮ್ಮ ಮೆಟ್ರೋ (ಬೆಂಗಳೂರು ಮೆಟ್ರೋ) ಟಿಕೆಟ್ ದರ ನಿಗದಿ ಮತ್ತು ದರ ಹೆಚ್ಚಳಕ್ಕೆ ಯಾರು ಜವಾಬ್ದಾರರು?

ನಮ್ಮ ಮೆಟ್ರೋ ಟಿಕೆಟ್ ದರಗಳನ್ನು ನಿಗದಿಪಡಿಸುವುದು ಅಥವಾ ಅವುಗಳನ್ನು ಕಾಲಕಾಲಕ್ಕೆ ಹೆಚ್ಚಿಸುವುದು ನೇರವಾಗಿ ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರ ಒಂದರ ಕೈಯಲ್ಲಿಲ್ಲ.

ಇದು ಕೇಂದ್ರ ಸರ್ಕಾರದ ಕಾಯ್ದೆಯಡಿ ನಿಗದಿಯಾದ ಒಂದು ಕಾನೂನು ಪ್ರಕ್ರಿಯೆಯ ಮೂಲಕ ನಡೆಯುತ್ತದೆ.

ಕಾನೂನು ಮತ್ತು ವ್ಯವಸ್ಥೆ....

ನಮ್ಮ ಮೆಟ್ರೋ ದರಗಳು ಮೆಟ್ರೋ ರೈಲ್ವೇಸ್ (ಆಪರೇಷನ್ & ಮೆಂಟೆನನ್ಸ್) ಕಾಯ್ದೆ, 2002 ಅಡಿಯಲ್ಲಿ ನಿಯಂತ್ರಿತವಾಗಿವೆ.

ಇದು ಕೇಂದ್ರ ಸರ್ಕಾರ ಜಾರಿಗೆ ತಂದ ಕಾಯ್ದೆ.



ಈ ಕಾಯ್ದೆಯ ಪ್ರಕಾರ, ಮೆಟ್ರೋ ಟಿಕೆಟ್ ದರಗಳು ಮತ್ತು ದರ ಪರಿಷ್ಕರಣೆಗಳನ್ನು
ಸ್ವತಂತ್ರ 'ಟಿಕೆಟ್ ದರ ನಿಗದಿ ಸಮಿತಿ' (Fare Fixation Committee – FFC) ಶಿಫಾರಸು ಮಾಡುತ್ತದೆ.

ಈ ಟಿಕೆಟ್ ದರ ನಿಗದಿ ಸಮಿತಿಯನ್ನು ಕೇಂದ್ರ ಸರ್ಕಾರ (ನಗರಾಭಿವೃದ್ಧಿ ಸಚಿವಾಲಯ / ಒಂಊಗಂ) ನೇಮಿಸುತ್ತದೆ.

ಸಮಿತಿ ನೀಡುವ ಶಿಫಾರಸುಗಳು ಕಾನೂನುಬದ್ಧವಾಗಿ ಬಾಧ್ಯಕರವಾಗಿರುತ್ತವೆ.

ಅಂದರೆ, ಮೆಟ್ರೋ ಸಂಸ್ಥೆ ಅವನ್ನು ಜಾರಿಗೆ ತರಲೇಬೇಕು.

ಟಿಕೆಟ್ ದರವನ್ನು ನಿಜವಾಗಿ ಯಾರು ನಿಗದಿಪಡಿಸುತ್ತಾರೆ?

ಟಿಕೆಟ್ ದರ ನಿಗದಿ ಸಮಿತಿ (ಈಈಅ):

ಮೆಟ್ರೋ ನಿರ್ಮಾಣ ವೆಚ್ಚ, ನಿರ್ವಹಣಾ ವೆಚ್ಚ, ಸಾಲದ ಬಡ್ಡಿ, ಪ್ರಯಾಣಿಕರ ಸಂಖ್ಯೆ ಮುಂತಾದ ಅಂಶಗಳನ್ನು ಪರಿಶೀಲಿಸುತ್ತದೆ. ದರ ಏರಿಕೆ ಅಥವಾ ದರ ಪರಿಷ್ಕರಣೆ ಸೂತ್ರವನ್ನು ಶಿಫಾರಸು ಮಾಡುತ್ತದೆ.

ಈ ಶಿಫಾರಸುಗಳನ್ನು BMRCL (ಬೆಂಗಳೂರು ಮೆಟ್ರೋ) ಕಡ್ಡಾಯವಾಗಿ ಜಾರಿಗೆ ತರಬೇಕು.

ಆದ್ದರಿಂದ, ಟಿಕೆಟ್ ದರ ನಿಗದಿ ಮಾಡುವ ಅಂತಿಮ ಅಧಿಕಾರ ಕೇಂದ್ರ ಕಾಯ್ದೆಯಡಿ ರಚಿಸಲಾದ ಸಮಿತಿಗೇ ಸೇರಿದೆ.

ಕರ್ನಾಟಕ ಸರ್ಕಾರದ ಪಾತ್ರ ಏನು?

ನಮ್ಮ ಮೆಟ್ರೋವನ್ನು ನಡೆಸುವ :ಒಖಅಐ ಒಂದು ಕೇಂದ್ರ–ರಾಜ್ಯ ಸಂಯುಕ್ತ ಸಂಸ್ಥೆ (Joint Venture).

ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಹಣಕಾಸು ಹಾಗೂ ಆಡಳಿತದಲ್ಲಿ ಪಾಲುದಾರರು.

ಆದರೆ, ಕರ್ನಾಟಕ ಸರ್ಕಾರ ಅಥವಾ :ಒಖಅಐ ಬೋರ್ಡ್ ಸ್ವತಂತ್ರವಾಗಿ ಟಿಕೆಟ್ ದರ ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಕಾನೂನುಬದ್ಧ ಅಧಿಕಾರ ಹೊಂದಿಲ್ಲ.

ರಾಜಕೀಯವಾಗಿ ಚರ್ಚೆಗಳು ನಡೆಯಬಹುದು, ಆದರೆ ಕಾನೂನಾತ್ಮಕವಾಗಿ ದರ ನಿಗದಿ ಪ್ರಕ್ರಿಯೆ ಕೇಂದ್ರ ಕಾಯ್ದೆಯ ಅಧೀನದಲ್ಲಿದೆ.

ಸಾರಾಂಶ (ಒಂದು ನೋಟದಲ್ಲಿ):ಸಂಸ್ಥೆ ಪಾತ್ರ

ಕೇಂದ್ರ ಸರ್ಕಾರ ಟಿಕೆಟ್ ದರ ನಿಗದಿ ಸಮಿತಿಯನ್ನು ನೇಮಿಸುತ್ತದೆ

ಟಿಕೆಟ್ ದರ ನಿಗದಿ ಸಮಿತಿ (ಈಈಅ) ಟಿಕೆಟ್ ದರ ಮತ್ತು ದರ ಹೆಚ್ಚಳ ಶಿಫಾರಸು ಮಾಡುತ್ತದೆ (ಕಡ್ಡಾಯ)

ಕರ್ನಾಟಕ ಸರ್ಕಾರ / :ಒಖಅಐ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುತ್ತದೆ; ಸ್ವತಂತ್ರ ಅಧಿಕಾರ ಇಲ್ಲ

ನಮ್ಮ ಮೆಟ್ರೋ ಟಿಕೆಟ್ ದರಗಳು ಮತ್ತು ಅವುಗಳ ಹೆಚ್ಚಳಗಳು ಕರ್ನಾಟಕ ಸರ್ಕಾರದ ನಿರ್ಧಾರವಲ್ಲ;

ಅವು ಕೇಂದ್ರ ಸರ್ಕಾರದ ಕಾಯ್ದೆಯಡಿ ರಚಿಸಲಾದ ಸ್ವತಂತ್ರ 'ಟಿಕೆಟ್ ದರ ನಿಗದಿ ಸಮಿತಿ' ನಿರ್ಧಾರಗಳ ಫಲಿತಾಂಶ.

ಸ್ಪಷ್ಟವಾಗಿ ಹೇಳಬೇಕಾದರೆ, ನಮ್ಮ ಮೆಟ್ರೋ ದರ ಏರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ರಾಜಕೀಯ ಟೀಕೆಗೆ ಗುರಿಯಾಗುತ್ತಿದ್ದರೂ, ಕಾನೂನುಬದ್ಧ ಹಾಗೂ ನೈತಿಕ ಹೊಣೆಗಾರಿಕೆ ಮುಖ್ಯವಾಗಿ ಕೇಂದ್ರ ಸರ್ಕಾರದ ಮೇಲೇ ಇದೆ.

ದರ ಏರಿಕೆಯ ಬಗ್ಗೆ ಉತ್ತರಿಸಬೇಕಾದವರೂ, ಜನತೆಗೆ ಸ್ಪಷ್ಟನೆ ನೀಡಬೇಕಾದವರೂ ಭಾರತ ಸರ್ಕಾರವೇ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಬಲವಾಗುತ್ತಿದೆ.

ಬೆಂಗಳೂರು ನಮ್ಮ ಮೆಟ್ರೋ ಇತ್ತೀಚಿನ ದರ ಪರಿಷ್ಕರಣೆ ಬಳಿಕ, ದೂರ ಆಧಾರಿತ ದರಗಳಲ್ಲಿ ದೇಶದಲ್ಲೇ ಅತ್ಯಂತ ದುಬಾರಿ ಮೆಟ್ರೋಗಳಲ್ಲೊಂದು ಆಗಿದೆ. ಸುಮಾರು 10 ಕಿ.ಮೀ ಪ್ರಯಾಣಕ್ಕೆ 53, 20 ಕಿ.ಮೀಗೆ 74, ಮತ್ತು 2530 ಕಿ.ಮೀ ಪ್ರಯಾಣಕ್ಕೆ 80 ರಿಂದ 95 ವರೆಗೆ ದರ ವಿಧಿಸಲಾಗುತ್ತಿದೆ. ಇದರಿಂದ ಮಧ್ಯಮ ಹಾಗೂ ದೀರ್ಘ ದೂರದ ದಿನನಿತ್ಯದ ಪ್ರಯಾಣ ಬೆಂಗಳೂರಿನಲ್ಲಿ ಹೆಚ್ಚು ಖರ್ಚಿನದಾಗಿದೆ.

ಇದಕ್ಕೆ ಹೋಲಿಸಿದರೆ ದೆಹಲಿ ಮೆಟ್ರೋ ಹೆಚ್ಚು ಸಮತೋಲನದ ದರ ವ್ಯವಸ್ಥೆ ಹೊಂದಿದೆ. ಸುಮಾರು 10 ಕಿ.ಮೀಗೆ340, 20 ಕಿ.ಮೀಗೆ 4 555, ಮತ್ತು 30 ಕಿ.ಮೀಗೂ ಗರಿಷ್ಠ 64 ಮಾತ್ರ. ಜಾಲವು ಬಹಳ ದೊಡ್ಡದಾಗಿದ್ದರೂ, ದೂರ ಹೆಚ್ಚಿದಂತೆ ದರ ಏರಿಕೆಯನ್ನು ನಿಯಂತ್ರಿಸಿರುವುದು ಗಮನಾರ್ಹ.



ಮುಂಬೈ ಮೆಟ್ರೋದಲ್ಲೂ ಇದೇ ರೀತಿಯ ಪ್ರವೃತ್ತಿ ಇದೆ. ಸುಮಾರು 1012 ಕಿ.ಮೀಗೆ 30, 20 ಕಿ.ಮೀಗೆ 4050, ಮತ್ತು 30 ಕಿ.ಮೀ ಪ್ರಯಾಣಕ್ಕೂ 60 ಒಳಗೆ ದರ ನಿಗದಿಯಾಗಿದೆ. ಅಂದರೆ, ಬೆಂಗಳೂರಿಗಿಂತ ದೀರ್ಘ ದೂರದ ಪ್ರಯಾಣವೂ ಮುಂಬೈನಲ್ಲಿ ಕಡಿಮೆ ವೆಚ್ಚದಲ್ಲಿದೆ.

ಚೆನ್ನೈ ಮೆಟ್ರೋ ವಿಶೇಷವಾಗಿ ಪ್ರಯಾಣಿಕ ಸ್ನೇಹಿ ದರ ರಚನೆ ಹೊಂದಿದೆ. ಇಲ್ಲಿ ಸುಮಾರು 10 ಕಿ.ಮೀಗೆ 30–40, 20 ಕಿ.ಮೀಗೆ 40–50, ಮತ್ತು ಗರಿಷ್ಠ ದರವೂ ಸುಮಾರು 50 ಕ್ಕೆ ಮಿತಿಯಾಗಿದೆ. ದೈನಂದಿನ ಪ್ರಯಾಣಿಕರ ಕೈಗೆಟುಕುವಿಕೆ ಮೇಲೆ ಚೆನ್ನೈ ಮೆಟ್ರೋ ಹೆಚ್ಚು ಒತ್ತು ನೀಡಿದೆ.

ಇನ್ನು ಕೊಲ್ಕತ್ತಾ ಮೆಟ್ರೋ ದೇಶದಲ್ಲೇ ಅತಿ ಕಡಿಮೆ ದರ ಹೊಂದಿರುವ ಮೆಟ್ರೋವಾಗಿದೆ. ಇಲ್ಲಿ 10 ಕಿ.ಮೀ ಪ್ರಯಾಣಕ್ಕೂ 10–, ಮತ್ತು ದೀರ್ಘ ದೂರದ ಪ್ರಯಾಣಕ್ಕೂ ಗರಿಷ್ಠ 25 ಮಾತ್ರ. ಸಾರ್ವಜನಿಕ ಸಾರಿಗೆಯನ್ನು ಜನಸಾಮಾನ್ಯರಿಗೆ ತಲುಪಿಸುವ ದೃಷ್ಟಿಯಿಂದ ಕೊಲ್ಕತ್ತಾ ಮೆಟ್ರೋ ದರ ನೀತಿ ಮಾದರಿಯಾಗಿದೆ.

ಒಟ್ಟಾರೆ ವಿಶ್ಲೇಷಣೆಯಲ್ಲಿ, ಸಮಾನ ದೂರದ ಪ್ರಯಾಣಕ್ಕೆ ಬೆಂಗಳೂರಿನ ನಮ್ಮ ಮೆಟ್ರೋ ದರಗಳು ದೆಹಲಿ, ಮುಂಬೈ, ಚೆನ್ನೈ ಹಾಗೂ ಕೊಲ್ಕತ್ತಾ ನಗರಗಳಿಗಿಂತ ಸ್ಪಷ್ಟವಾಗಿ ಹೆಚ್ಚು. ದೊಡ್ಡ ಜಾಲ ಮತ್ತು ಹೆಚ್ಚಿನ ಪ್ರಯಾಣಿಕರನ್ನು ಹೊಂದಿರುವ ನಗರಗಳಲ್ಲಿ ದರ ಕಡಿಮೆಯಾಗಿರುವಾಗ, ಛಿಂಟಛಿಚಿಡಿಚಿಣುತಜಟಥಿ ಚಿಕ್ಕ ಜಾಲವಿರುವ ಬೆಂಗಳೂರಿನಲ್ಲಿ ದರ ಹೆಚ್ಚು ಇರುವುದೇ ಸಾರ್ವಜನಿಕ ಅಸಮಾಧಾನದ ಪ್ರಮುಖ ಕಾರಣವಾಗಿದೆ.

ಆ ದೃಷ್ಟಿಯಿಂದ, ನಮ್ಮ ಮೆಟ್ರೋ ದರ ರಚನೆ ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸುವ ಬದಲು, ಖಾಸಗಿ ವಾಹನ ಬಳಕೆಯನ್ನು ಹೆಚ್ಚಿಸುವ ಅಪಾಯವನ್ನೇ ಉಂಟುಮಾಡುತ್ತಿದೆ ಎಂಬ ಆತಂಕ ವ್ಯಕ್ತವಾಗುತ್ತಿದೆ.

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ಮನಸ್ಸುಗಳ ಅಂತರಂಗದ ಚಳವಳಿ,

# ರಾಮನಗರ ಸುದ್ದಿ ಕಾರ್ನರ್

## ಕಾರ್ಮಿಕ ಸಂಹಿತೆ ವಿರೋಧಿಸಿ ಇಂದು ಪ್ರತಿಭಟನೆ



ರಾಮನಗರ : ಕೇಂದ್ರ, ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಯನ್ನು ವಿರೋಧಿಸಿ ಫೆ.12ರ ಗುರುವಾರ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜೆಸಿಟಿಯು ಜಿಲ್ಲಾ ಸಂಚಾಲಕ ರಾಘವೇಂದ್ರ ತಿಳಿಸಿದರು.

ನಗರದ ಚೈತನ್ಯ ಭವನದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.12ರ ಗುರುವಾರ ಬಿಡದಿ ಹಾಗೂ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ನಮ್ಮ ಪ್ರತಿಭಟನೆಗೆ ಕಾರ್ಮಿಕರು ಬೆಂಬಲ ಸೂಚಿಸಿದ್ದಾರೆ ಎಂದರು.

ಕಾರ್ಮಿಕ ಕಾಯ್ದೆಯಲ್ಲಿ ದೇಶದ ಯುವಜನತೆ ಮತ್ತು ಶ್ರಮಿಕ ವರ್ಗವನ್ನು ಸಂಪೂರ್ಣವಾಗಿ ಆಧುನಿಕ ಗುಲಾಮಗಿರಿಗೆ ತಳ್ಳಲು ಅವಕಾಶ ಕಲ್ಪಿಸಿವೆ. ರಾಜ್ಯ ಮಟ್ಟದಲ್ಲಿ ನಾಲ್ಕು ಕಾರ್ಮಿಕ ನಿಯಮಗಳನ್ನು ರೂಪಿಸಲು ಕಾರ್ಮಿಕ ಇಲಾಖೆ ಮುಂದಾಗಿದ್ದೂ, ಮೂರು ಕರಡುಗಳನ್ನು ಜ.23ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ ಹೊರಡಿಸಿ 45 ದಿನಗಳ ಒಳಗೆ ಸಲಹೆ, ತಿದ್ದುಪಡಿಗಳನ್ನು ಸಲ್ಲಿಸಲು ಗಡುವು ವಿಧಿಸಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ ಈ ಕರಡು ಅಧಿಸೂಚನೆಗಳ ಕೇಂದ್ರ ಸರ್ಕಾರದ ಮೂಲ ಕಾನೂನುಗಳಿಗಿಂತಲೂ ಕಠಿಣವಾಗಿರುವುದು ಮಾತ್ರವಲ್ಲದೆ, ಆಸಂವಿಧಾನಿಕ ಹಾಗೂ ಅನಿಯಂತ್ರಿತ ನಿಭಂಧನೆಗಳಾಗಿವೆ. ಕರ್ನಾಟಕ ಉದ್ಯೋಗ, ಸುರಕ್ಷತೆ ಮತ್ತು ಆರೋಗ್ಯ ಸಂಹಿತೆ ಹಾಗೂ ಸಾಮಾಜಿಕ ಭದ್ರತಾ ಸಂಹಿತೆಯ ಮೇಲಿನ ನಿಯಮಗಳು ರೂಪಿಸುವುದನ್ನು ಮಾತ್ರವೆ ಬಾಕಿ ಉಳಿಸಿಕೊಂಡಿದೆ ಎಂದರು.

ಕೈಗಾರಿಕಾ ಸಂಬಂಧಗಳ ನಿಯಮಗಳಲ್ಲಿ ಸಂಘಟನಾ ಹಕ್ಕಿಗೆ ಅಡ್ಡಿ ಇದೆ. ಕಾರ್ಮಿಕ ಸಂಘದ ಮಾನ್ಯತೆಗೆ ಒಟ್ಟು ಕಾರ್ಮಿಕರಲ್ಲಿ ಶೇ 51 ರಷ್ಟು ಮತಗಳನ್ನು ಕಡ್ಡಾಯಗೊಳಿಸಿದೆ. ಇದು ಸಾಧ್ಯವಿಲ್ಲದ ಮಿತಿ, ಮುಷ್ಕರ ಹಮ್ಮಿಕೊಳ್ಳುವುದಾದರೆ 6 ತಿಂಗಳು 'ಕೂಲಿಂಗ್ ಆಫ್' ಅವಧಿಯನ್ನು (ತೆಗೆದುಕೊಂಡ ನಿರ್ಧಾರದ ಬಗ್ಗೆ ಮರು ಚಿಂತನೆ ಮಾಡುವ ಸಮಯ) ವಿಧಿಸಿರುವುದು ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ನಿಯಮಗಳ ಉಲ್ಲಂಘನೆಯಾಗಲಿದೆ ಎಂದು ತಿಳಿಸಿದರು.

'ವೇತನ ಸಂಹಿತೆ' ನಿಯಮಗಳಲ್ಲಿಯೂ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ವಸತಿ ಸೌಕರ್ಯದ ಹೆಸರಿನಲ್ಲಿ ಯಾವುದೆ ಮಾನದಂಡಗಳಿಲ್ಲದೆ ವೇತನ ಕಡಿತಗೊಳಿಸಲು ಮಾಲೀಕರಿಗೆ ಮುಕ್ತ ಅವಕಾಶ ನೀಡಲಾಗಿದೆ ಎಂದರು.

ಬ್ಯಾಂಕೇತರ ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ವೇತನ ಪಾವತಿಗೆ ಅವಕಾಶ ನೀಡಿರುವುದು ಕಾರ್ಮಿಕರನ್ನು ಶೋಷಣೆಗೆ ತಳ್ಳಲಿದೆ. ವೇತನ ಬಾಕಿ ಹಕ್ಕನ್ನು ಪಡೆಯಲು ಕೇವಲ ಒಂದು ವರ್ಷ ಮಿತಿ ನಿಗಧಿ ಪಡಿಸಲಾಗಿದೆ. ರಾತ್ರಿ ಪಾಳಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸುರಕ್ಷಿತ ಸಾರಿಗೆಯನ್ನು ಆರ್ಥಿಕ ಕಾರ್ಯ ಸಾಧ್ಯತೆಯ ಮೇಲೆ ನಿಗಧಿ ಪಡಿಸಲಾಗಿದೆ. ಇದು ಮಹಿಳೆಯರ ಸುರಕ್ಷತೆಯ ಹಕ್ಕನ್ನು ಕಸಿದುಕೊಂಡಂತಿದೆ ಎಂದು ದೂರಿದರು.

ವಲಸೆ ಕಾರ್ಮಿಕರನ್ನು ನಿರ್ಲಕ್ಷಿಸಲಾಗಿದೆ. ಉಚಿತ ಆರೋಗ್ಯ ತಪಾಸಣೆಯನ್ನು ನೇರ ಉದ್ಯೋಗಿಗಳಿಗೆ ಸೀಮಿತಗೊಳಿಸಿ, ಗುತ್ತಿಗೆ ಕಾರ್ಮಿಕರನ್ನು ಹೊರಗಿಡಲಾಗಿದೆ. ಇದು ತಾರತಮ್ಯದ ಕ್ರಮವಾಗುತ್ತದೆ. ಇದು ಗಂಭೀರ ಸುರಕ್ಷತಾ ಲೋಪಗಳನ್ನು ಕೇವಲ ದಂಡ ಪಾವತಿಯ ಮೂಲಕ ಇತ್ಯರ್ಥ ಪಡಿಸಲು ಅವಕಶ ನೀಡಿರುವುದು ಕಾರ್ಮಿಕರ ಪ್ರಾಣಕ್ಕೆ ಅಪಾಯ ತಂದೊಡ್ಡಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೆಐಇಇಎಫ್‌ನ ಅಧ್ಯಕ್ಷ ಗಂಗಣ್ಣ, ಸಿಐಟಿಯುನ ಜಿಲ್ಲಾಧ್ಯಕ್ಷ ಯೋಗೇಶ್, ಟಿಕೆಎಂಇಯು ಪ್ರಧಾನ ಕಾರ್ಯದರ್ಶಿ ರವಿಕುಮಾರ್, ಎಂಇಎನ ಪ್ರಧಾನ ಕಾರ್ಯದರ್ಶಿ ಮಂಜುನಾಥ್, ರೈತ ಮುಖಂಡ ಅಂಕಪ್ಪ, ಕೆಐಇಇಎಫ್‌ನ ಮುಖಂಡ ರವಿ, ವಕೀಲ ವಿನೋದ್ ಇದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಮಂಡ್ಯ ಜಿಲ್ಲೆಯು ಇ-ಪೌತಿ ಖಾತಾ ಆಂದೋಲನದಲ್ಲಿ ರಾಜ್ಯಕ್ಕೆ ಪ್ರಥಮ



ಪೌತಿ ಖಾತೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗ್ರಾಮ ಅಡಳಿತಾಧಿಕಾರಿಗಳಿಗೆ ಅಭಿನಂದನೆ

ಪೌತಿ ಖಾತೆ ಪ್ರಕ್ರಿಯೆಯನ್ನು ಮಂಡ್ಯ ಜಿಲ್ಲೆಯು ಈ ಪೌತಿ ಖಾತೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು ಈ ಪೌತಿ ಖಾತೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ 35 ಗ್ರಾಮ ಆಡಳಿತಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಾದ ಡಾ ಕುಮಾರ ಅವರು ಮೆಚ್ಚುಗೆ ವ್ಯಕ್ತಪಡಿಸಿ ಗ್ರಾಮ ಆಡಳಿತಾಧಿಕಾರಿಗಳಿಗೆ ಅಭಿನಂದನಾ ಪತ್ರ ನೀಡಿದರು.

ಜಮೀನಿನ ಪೌತಿ ಖಾತೆ ಪ್ರಕ್ರಿಯೆಯನ್ನು ತಾವು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಿ ನಿಗದಿತ ಸಮಯದಲ್ಲಿ ಕೆಲಸ ಮಾಡಿದ ಗ್ರಾಮ ಆಡಳಿತಾಧಿಕಾರಿಗಳಿಗೆ ಜನಪರ ಸೇವೆ ಮತ್ತು ಕರ್ತವ್ಯ ನಿಷ್ಠೆಗೆಯ ಶ್ಲಾಘನೆ ವ್ಯಕ್ತಪಡಿಸಿದರು.

ಇಪೌತಿ' ಖಾತೆ ಆಂದೋಲನ ತ್ವರಿತಗೊಳಿಸಿ

ಮೃತರ ಹೆಸರಿನಲ್ಲಿರುವ ಜಮೀನುಗಳನ್ನು ವಾರಸುದಾರರಿಗೆ ಖಾತೆ ಮಾಡಿಕೊಡುವ 'ಇ ಪೌತಿ' ಖಾತೆ ಆಂದೋಲನ ತ್ವರಿತ ಗತಿಯಲ್ಲಿ ಸಾಗಬೇಕು ಎಂದು ಅವರು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.ಸರ್ಕಾರದ ಸೂಚನೆಗಳನ್ನು ಪಾಲಿಸಬೇಕು. ಜನರನ್ನು ಕಚೇರಿಗಳಿಗೆ ಅಲೆದಾಡಿಸುವ ಪ್ರವೃತ್ತಿ ಸರಿಯಲ್ಲ. ಮುಂದಿನ ದಿನಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಖಾತೆ ಮಾಡುವಾಗ ತಾಂತ್ರಿಕ ಸಮಸ್ಯೆ ಎದುರಾದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು. ಕೆಲಸದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳು ಶಿಸ್ತು ಕ್ರಮ ಕೈಗೊಳ್ಳಲಾಗುವುದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಂಡ್ಯ ಉಪ ವಿಭಾಗಧಿಕಾರಿಗಳಾದ ಎಂ. ಶಿವಮೂರ್ತಿ, ಪಾಂಡವಪುರ ಉಪ ವಿಭಾಗಧಿಕಾರಿ ಶ್ರೀನಿವಾಸ್ ಹಾಗೂ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಉಪಸ್ಥಿತರಿದ್ದರು.

## ಈ ರೀತಿಯ ಜನರಿಂದ ದೂರವಿದ್ದಷ್ಟು ಒಳ್ಳೆಯದು

ಜೀವನಕ್ಕೆ ಸಂಬಂಧಿಸಿದ ಸಾಕಷ್ಟು ವಿಚಾರಗಳ ಬಗ್ಗೆ ಹೇಳಿದ್ದಾರೆ, ಅದೇ ರೀತಿ ಇತರರಿಗೆ ಸಹಾಯ ಮಾಡಬೇಕು ಎಂಬುದನ್ನೂ ಹೇಳಿದ್ದಾರೆ. ಇದು ಮಾತ್ರವಲ್ಲದೆ ಈ ಕೆಲವೊಂದಷ್ಟು ಜನರಿಗೆ ಯಾವುದೇ ಕಾರಣಕ್ಕೂ ಸಹಾಯ ಮಾಡಬಾರದು, ಅವರಿಂದ ದೂರವಿದ್ದಷ್ಟು ಒಳ್ಳೆಯದು ಎಂಬ ವಿಚಾರವನ್ನು ತಿಳಿಸಿದ್ದಾರೆ. ಹಾಗಿದ್ರೆ ಯಾರಿಂದ ದೂರವಿರಬೇಕು ಎಂಬುದರ ಸಂಕ್ಷಿಪ್ತ ಮಾಹಿತಿಯನ್ನು ತಿಳಿಯಿರಿ.



**ಸಹಾಯ ಮಾಡುವುದು ಒಳ್ಳೆಯ ಗುಣ.**

ಹೌದು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು ಮಾನವೀಯತೆ. ಆದರೆ ಇಂತಹ ಕೆಲವೊಂದಿಷ್ಟು ಜನರಿಗೆ ಯಾವುದೇ ಕಾರಣಕ್ಕೂ ಸಹಾಯ ಮಾಡಬಾರದು ಅಂತಹ ಜನರಿಂದ ಸಾಧ್ಯವಾದಷ್ಟು ಅಂತರವನ್ನು ಕಾಯ್ದುಕೊಳ್ಳಬೇಕು ಎಂದು ಆಚಾರ್ಯ ಚಾಣಕ್ಯರು ಸಲಹೆ ನೀಡಿದ್ದಾರೆ. ಚಾಣಕ್ಯರು ಹೇಳುವಂತೆ ಯಾವ ರೀತಿಯ ಜನರಿಗೆ ಸಹಾಯ ಮಾಡಬಾರದು, ಅಂತಹ ಜನರಿಂದ ಯಾವ ಕಾರಣಕ್ಕಾಗಿ ದೂರವಿರಬೇಕು ಎಂಬುದರ ಸಂಕ್ಷಿಪ್ತ ಮಾಹಿತಿಯನ್ನು ತಿಳಿದುಕೊಳ್ಳಿ

**ಇಂತಹ ಜನರಿಗೆ ಸಹಾಯ ಮಾಡಬಾರದು:**

ಮೂರ್ಖ ವ್ಯಕ್ತಿ: ಆಚಾರ್ಯ ಚಾಣಕ್ಯರು ಮೂರ್ಖ ವ್ಯಕ್ತಿಯಿಂದ ಆದಷ್ಟು ದೂರವಿರಬೇಕು ಎಂದು ಸಲಹೆ ನೀಡಿದ್ದಾರೆ. ಏಕೆಂದರೆ ಮೂರ್ಖನಿಗೆ ನಿಮ್ಮ ಸಹಾಯದ ಮಹತ್ವ ಅರ್ಥವಾಗುವುದಿಲ್ಲ, ಇಂತಹವರಿಗೆ ಉಪಕಾರ ಮಾಡುವುದೇ ನಿಷ್ಪ್ರಯೋಜಕ. ಆದ್ದರಿಂದ ಇಂತಹ ಜನರಿಂದ ದೂರವಿರುವುದೇ ತುಂಬಾ ಒಳ್ಳೆಯದು.

**ಕೆಟ್ಟ ಸ್ವಭಾವದ ವ್ಯಕ್ತಿ:** ಕೆಟ್ಟ ಸ್ವಭಾವದ ಯಾರಾದರೂ ನಿಮಗೆ ತಿಳಿದಿದ್ದರೆ, ಅವರಿಂದ ದೂರವಿರುವುದು ತುಂಬಾ ಒಳ್ಳೆಯದು. ಅಂತಹ ಜನರಿಗೆ ಸಹಾಯ ಮಾಡುವುದು ಅಥವಾ ಒಳ್ಳೆಯದನ್ನು ಮಾಡುವುದು ಸಹ ಹಾನಿಯನ್ನುಂಟುಮಾಡುತ್ತದೆ. ಅಂತಹ ಜನರೊಂದಿಗೆ ಸಂಪರ್ಕದಲ್ಲಿದ್ದರೆ ಸಮಾಜ ಮತ್ತು ಕುಟುಂಬ ವರ್ಗದಲ್ಲಿ ನಿಮ್ಮ ಗೌರವ ಹಾಳಾಗುತ್ತದೆ. ಇದು ಅವಮಾನಕ್ಕೆ ಸಹ ಕಾರಣವಾಗಬಹುದು. ಜೊತೆಗೆ ಅಂತಹ ಜನರ ಸಹವಾಸ ಮಾಡಿದರೇ ನೀವು ಕೂಡ ಕೆಟ್ಟ ಬುದ್ಧಿಯನ್ನು ಕಲಿಯುವ ಸಾಧ್ಯತೆ ಇದೆ. ಇದೇ ಕಾರಣಕ್ಕೆ ಕೆಟ್ಟ ಸ್ವಭಾವದ ಜನರಿಂದ ದೂರವಿರಬೇಕು ಎಂದು ಆಚಾರ್ಯ ಚಾಣಕ್ಯರು ಹೇಳುತ್ತಾರೆ..

**ಅನಗತ್ಯವಾಗಿ ದುಃಖಿತನಾಗಿರುವ ವ್ಯಕ್ತಿ:** ತಮ್ಮ ಜೀವನದಲ್ಲಿ ಅತೃಪ್ತರಾಗಿರುವ ಮತ್ತು ನಿರಂತರವಾಗಿ ದುಃಖಿತನಾಗಿರುವ ವ್ಯಕ್ತಿ ಇತರರ ಪ್ರಗತಿಯನ್ನು ನೋಡಿ ಅಸೂಯೆ ಪಡುತ್ತಾನೆ. ಆದ್ದರಿಂದ ಇಂತಹ ಸ್ವಭಾವದ ವ್ಯಕ್ತಿಗಳಿಂದ ದೂರವಿರಿ ಎಂದು ಆಚಾರ್ಯ ಚಾಣಕ್ಯರು ಸಲಹೆ ನೀಡಿದ್ದಾರೆ. ಅವರು ಇತರರ ಸಂತೋಷವನ್ನು ಅಸೂಯೆಪಡುತ್ತಾರೆ ಮತ್ತು ಶಪಿಸುತ್ತಾರೆ. ಹೀಗಾಗಿ, ಅಸೂಯೆ ಭಾವನೆಗಳನ್ನು ಹೊಂದಿರುವ ಮತ್ತು ಅತೃಪ್ತರಾಗಿರುವವರಿಂದ ದೂರವಿರುವುದು ನಮಗೆ ಒಳ್ಳೆಯದು.

**ಕೋಪಗೊಂಡ ಅಥವಾ ಮುಂಗೋಪದ ಜನರು:** ಆಚಾರ್ಯ ಚಾಣಕ್ಯರು ಕೋಪದ ಸ್ವಭಾವ ಹೊಂದಿರುವ ವ್ಯಕ್ತಿಯನ್ನು ಎಂದಿಗೂ ಹತ್ತಿರ ಸೇರಿಸಬಾರದು ಎಂದು ಸಲಹೆ ನೀಡಿದ್ದಾರೆ. ಮನುಷ್ಯನ ದೊಡ್ಡ ಶತ್ರು ಕೋಪ. ಕೋಪವು ವ್ಯಕ್ತಿಯ ತರ್ಕಿಸುವ ಮತ್ತು ಗ್ರಹಿಸುವ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ. ಕೋಪಗೊಂಡ ವ್ಯಕ್ತಿಯು ತನ್ನನ್ನು ಮತ್ತು ಇತರರನ್ನು ನೋಯಿಸಿಕೊಳ್ಳುತ್ತಾನೆ. ಈ ವ್ಯಕ್ತಿ ವಿರೋಧಿಗಳಿಗಿಂತ ಹೆಚ್ಚು ಅಪಾಯಕಾರಿ ಆದ್ದರಿಂದ ಇಂತಹ ವ್ಯಕ್ತಿಗಳಿಂದ ದೂರವಿದ್ದಷ್ಟು ಒಳ್ಳೆಯದು.

**ಮಾದಕ ವ್ಯಸನಿಗಳು:** ಮಾದಕ ವ್ಯಸನಿಗಳಿಗೆ ಸಹಾಯ ಮಾಡದಂತೆ ಆಚಾರ್ಯ ಚಾಣಕ್ಯ ಸಲಹೆ ನೀಡಿದ್ದಾರೆ. ಅಂತಹ ಜನರು ಎಂದಾದರೂ ಸಹಾಯ ಕೇಳಿದರೆ, ನಿರಾಕರಿಸುವುದು ಉತ್ತಮ. ಏಕೆಂದರೆ ಅಂತಹ ಜನರು, ಮಾದಕತೆಯ ಪ್ರಭಾವದಲ್ಲಿ, ಉಳಿದೆಲ್ಲವನ್ನೂ ಮರೆತು ನೀರಿನಂತೆ ಹಣವನ್ನು ಖರ್ಚು ಮಾಡುತ್ತಾರೆ. ಅಲ್ಲದೆ ಇವರಿಂದ ಇತರರಿಗೆ ಹಾನಿಯೇ ಹೆಚ್ಚು. ಆದ್ದರಿಂದ ಅಂತಹ ಜನರಿಗೆ ಎಂದಿಗೂ ಸಹಾಯ ಮಾಡಬಾರದು.

## ಸಮ ಸಮಾಜದ ನಿರ್ಮಾಣಕ್ಕೆ ಶರಣರ ವಚನಗಳು ದಾರಿದೀಪ




ರಾಮನಗರ, : ಮಾತಿನಲ್ಲಿ ಮಂಟಪ ಕಟ್ಟುವುದನ್ನು ಬಿಟ್ಟು ಪ್ರತಿಯೊಬ್ಬರೂ ದುಡಿಯಲೇಬೇಕು. ಇನ್ನೊಬ್ಬರ ದುಡಿಮೆಯನ್ನು ಕುಳಿತು ತಿನ್ನುವ ಅಧಿಕಾರ ಯಾರಿಗೂ ಇಲ್ಲ ಎಂದು ತಮ್ಮ ವಚನಗಳ ಮೂಲಕ ಶರಣರು ಸಾರಿ ಹೇಳಿದರು. ಸಮ) ಸಮಾಜದ ನಿರ್ಮಾಣಕ್ಕೆ ಈ ಶರಣರ ವಚನಗಳು ದಾರಿ ದೀಪಗಳಾಗಿವೆ ಎಂದು ಜಾನಪದ ಲೋಕದ ಕ್ಯೂರೇಟರ್ ಡಾ. ಯು. ಎಂ. ರವಿ ಅವರು ತಿಳಿಸಿದರು.

ಅವರು ಫೆ.10ರ ಮಂಗಳವಾರ ನಗರದ ಕಂದಾಯ ಭವನದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಬಸವಾದಿ ಶರಣರು, ಅಲ್ಲಮಪ್ರಭು ಆದಿಯಾಗಿ ಆದ್ಯ 777 ವಚನಕಾರರು ( ಅಮರಗಣಂಗಳು) 33 ಮಹಿಳಾ ವಚನಕಾರರು, ಸುಮಾರು 24 ಸಾವಿರ ವಚನಗಳನ್ನು ಬರೆದು ಕನ್ನಡ ಸಾಹಿತ್ಯಕ್ಕೆ, ವಚನ ಸಾಹಿತ್ಯ ಚರಿತ್ರೆಗೆ ಕೊಡುಗೆಯಾಗಿ ನೀಡಿದ್ದಾರೆ. ಇದರಿಂದ ಕನ್ನಡ ವಚನ ಸಾಹಿತ್ಯ ಶ್ರೀಮಂತವಾಗಿದೆ ಎಂದರು.

12ನೇ ಶತಮಾನದ ವಚನಕಾರರು ಕೇವಲ ತೋರಿಕೆಗೆ ಬದುಕದೇ ಆತ್ಮಶುದ್ಧಿ ಮತ್ತು ಕಾಯಕತತ್ವವನ್ನು ವಚನಗಳ ಮೂಲಕ ಸಾರಿ ಹೇಳಿದರು. ಯೋಗ್ಯತೆಗೆ ಜಾತಿ ಎಂದಿಗೂ ಅಡ್ಡಿ ಬರುವುದಿಲ್ಲ. ಅಂತರಜಾತಿ ವಿವಾಹ ಪ್ರೋತ್ಸಾಹ, ಕಾಯಕ ತತ್ವ ಪರಿಕಲ್ಪನೆ, ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆಯ ಖಂಡನೆ, ಅಸ್ಪೃಶ್ಯತೆ ನಿವಾರಣೆ, ಮೂಢನಂಬಿಕೆ ವಿರೋಧ ಮತ್ತು ಅಮಾನವೀಯ ಆಚರಣೆಗಳನ್ನು ವಿರೋಧಿಸಿದರು ಎಂದು ತಿಳಿಸಿದರು.

ತಳಸಮುದಾಯದಲ್ಲಿ ಹುಟ್ಟಿ ಚರ್ಮ ಹದಗೊಳಿಸುವ ಪಾದುಕೆಗಳನ್ನು ಮಾಡುವ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಈ ವಚನಕಾರರು ನಡೆ-ನುಡಿ, ಆಚಾರ-ವಿಚಾರ ಮಾತು ಮತ್ತು ಮಾಡುವ ಕೆಲಸ ಎಲ್ಲವೂ ಶುದ್ದವಾಗಿರಬೇಕು. ಬಸವಣ್ಣ ತಮ್ಮ ವಚನ ಒಂದರಲ್ಲಿ ಮಾದರನೆಂಬೆನೆ ಚನ್ನಯ್ಯನ: ಡೊಹರ ನೆಂಬೆನೆ, ಕಕ್ಕಯ್ಯನ ಎನ್ನುವ ಸಾಲುಗಳ ಮೂಲಕ ಗೌರವಿಸಿದ್ದಾರೆ. ಅಪ್ಪನು ನಮ್ಮ ಮಾದರ ಚನ್ನಯ್ಯ ಬೊಪ್ಪನು ನಮ್ಮ ಡೊಹರ ಕಕ್ಕಯ್ಯ ಹೀಗೆ ಬಸವಣ್ಣ ಇವರ ಕಾಯಕ ನಿಷ್ಠೆಗೆ ಗೌರವ ನೀಡಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಸತೀಶ್ ಅವರು ಮಾತನಾಡಿ, ಇಷ್ಟೊಂದು ವಚನಕಾರರು ನಮ್ಮ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ. ಈ ಕಾಲಕ್ಕೆ ಇದ್ದಿದ್ದರೆ ಸಿಗುವ ಗೌರವ ಮನ್ನಣೆ ಎಷ್ಟಿರುತ್ತಿತ್ತು ಎನ್ನುವುದನ್ನ ಮನಗಾಣಬೇಕು ಎಂದರು.

ನಿರೂಪಣೆ ಮತ್ತು ನಾಡಗೀತೆ ಶ್ರೀನಿವಾಸ್ ವಿ. ನಿರ್ವಹಿಸಿದರು. ನಾಟಕ ಅಕಾಡೆಮಿ ಸದಸ್ಯರಾದ ಕುಂಬಾಪುರ ಬಾಬು, ಜಾನಪದ ಜಾತ್ರೆಯ ನಿರ್ದೇಶಕರಾದ ಸಿದ್ದರಾಮು, ಕಲಾವಿದರಾದ ಜಯಸಿಂಹ, ಬಿ.ಸಿದ್ದರಾಜಯ್ಯ, ಅನ್ನದಾನಯ್ಯ, ಹೊಂಬಾಳಯ್ಯ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಜರಿದ್ದರು.

## ತಾಲ್ಲೂಕು ಮಟ್ಟದ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಪತ್ರಕರ್ತರು ತಮ್ಮ ವೃತ್ತಿ ನಿರತ ಚಟುವಟಿಕೆಗಳ ಸಂಬಂಧ ತಮ್ಮ ಜಿಲ್ಲಾದ್ಯಂತ ಉಚಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಉಚಿತ ಬಸ್ ಪಾಸ್ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.




ಪತ್ರಕರ್ತರು ತಾವು ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಸಂಸ್ಥೆಗಳಿಂದ ಸೇವಾ ಪ್ರಮಾಣಪತ್ರ, ಶಿಫಾರಸ್ಸು ಪತ್ರ ಮತ್ತು 11 ತಿಂಗಳುಗಳ ವೇತನಪತ್ರ (ಲೈನೇಜ್/ಸಂಭಾವನೆ/ಕಮೀಷನ್ ಪಡೆದಿರುವ ದಾಖಲೆ) ಗಳನ್ನು ಅಥವಾ ವೇತನ ಜಮಾ ಆಗಿರುವ ಮಾಹಿತಿ ಇರುವಂತಹ ಬ್ಯಾಂಕ್ ಸ್ಟೇಟಮೆಂಟ್ ಲಗತ್ತಿಸಿ "ಸೇವಾಸಿಂಧು" ಪೋರ್ಟಲ್ (https://sevasindhu.karnataka.gov.in) ಮೂಲಕ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಆನ್ ಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.

ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ.

ರಾಜ್ಯದ ಎಲ್ಲ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಈ ಸದುಪಯೋಗ ಪಡೆದುಕೊಳ್ಳಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಸರಳ ಜೀವನದ ಶ್ರೇಷ್ಠ ಸಂಘಟಕ ಪಂಡಿತ್ ದೀನದಯಾಳ್' ಉಪಾಧ್ಯಾಯರಿಗೆ ಗೌರವ ನಮನ



ತುಮಕೂರು: ಭಾರತೀಯ ಜನಸಂಘ ಸಂಸ್ಥಾಪಕರಲ್ಲಿ ಒಬ್ಬರಾದ ಪಂಡಿತ್ ದೀನದಯಾಳ ಉಪಾಧ್ಯಾಯ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ದೀನದಯಾಳ್ ಅವರು ಅಪ್ಪಟ ಸರಳ ಜೀವನ ನಡೆಸಿದರು, ಅವರ ಬದುಕು ಸರಳ ಜೀವನ, ಉನ್ನತ ಚಿಂತನೆಗೆ ಮಾದರಿಯಾಗಿತ್ತು ಎಂದು ಶಾಸಕ ಜಿ.ಬಿ.ಜ್ಯೋತಿಗಣೇಶ್ ಹೇಳಿದರು.

ಬುಧವಾರ ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಪಂಡಿತ ದೀನದಯಾಳ್ ಉಪಾಧ್ಯಾಯ ಅವರ ಪುಣ್ಯಸ್ಮರಣೆ ಅಂಗವಾಗಿ ದಯಾಳರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಸಮರ್ಪಿಸಿ ಮಾತನಾಡಿದ ಶಾಸಕರು, ಇವರ ಪುಣ್ಯಸ್ಮರಣೆಯನ್ನು ಸಮರ್ಪಣಾ ದಿನವಾಗಿ ಇಂದು ಆಚರಿಸಲಾಗುತ್ತಿದೆ. ಇವರ ನಿಧನದ ನಂತರ ಭಾರತ ಸರ್ಕಾರವು ದೀನದಯಾಳ್ ಅಂತ್ಯೋದ್ಯಯ ಯೋಜನೆ ಸೇರಿದಂತೆ ಹಲವಾರು ಯೋಜನೆಗಳಿಗೆ ಇವರ ಹೆಸರಿಟ್ಟು ಗೌರವಿಸಿದೆ ಎಂದರು.

ದೀನದಯಾಳರು ಯಾವುದೇ ಅಧಿಕಾರಕ್ಕೆ ಆಸೆಪಡದೆ ಸಾಮಾನ್ಯ ಕಾರ್ಯಕರ್ತರಂತೆ ಬದುಕುತ್ತಿದ್ದರು. ರೈಲಿನಲ್ಲಿ ಮೂರನೇ ದರ್ಜೆಯ ಬೋಗಿಯಲ್ಲೇ ಪ್ರಯಾಣ ಮಾಡುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಈ ಸರಳತನ ಕಾರ್ಯಕರ್ತರಲ್ಲಿ ಇವರ ಬಗ್ಗೆ ಅಪಾರ ಗೌರವ ಮೂಡಿಸಿತ್ತು. ಯಾವುದೇ ಯೋಜನೆ ರೂಪಿಸುವಾಗ ಅಥವಾ ಕೆಲಸ ಮಾಡುವಾಗ ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಅದರ ಲಾಭ ಸಿಗುತ್ತದೆಯೆ ಎಂದು ಯೋಚಿಸುವುದು ಅವರ ಕೆಲಸದ ವಿಧಾನವಾಗಿತ್ತು. ಇದನ್ನೇ ಅವರು ಅಂತ್ಯೋದಯ ಎಂದು ಕರೆದರು. ಆರ್ಥಿಕ ಹಾಗೂ ಸಾಮಾಜಿಕ ಚಿಂತನೆಗಳು ಬಡವನ ಹಸಿವನ್ನು ನೀಗಿಸುವತ್ತ ಇರಬೇಕು ಎಂಬುದು ಅವರ ಗುರಿಯಾಗಿತ್ತು ಎಂದು ಜ್ಯೋತಿಗಣೇಶ್ ತಿಳಿಸಿದರು.

ಅವರ ಕಾರ್ಯವೈಖರಿಯು ಸ್ವಾರ್ಥವಿಲ್ಲದ ಸೇವೆ, ಶಿಸ್ತುಬದ್ಧ ಸಂಘಟನೆ ಮತ್ತು ಸಮಗ್ರ ಮಾನವತಾವಾದದ ಮೇಲೆ ನಿಂತಿತ್ತು. ಈ ಶ್ರಮವೇ ಮುಂದೆ ಭಾರತೀಯ ಜನಸಂಘವು ದೇಶದ ಬಲಿಷ್ಠ ರಾಜಕೀಯ ಶಕ್ತಿಯಾಗಿ ಬೆಳೆಯಲು ಅಡಿಪಾಯವಾಯಿತು ಎಂದು ಹೇಳಿದರು.

ನಗರ ಬಿಜೆಪಿ ಅಧ್ಯಕ್ಷ ಟಿ.ಕೆ. ಧನುಷ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ನವಚೇತನ್, ಮುಖಂಡರಾದ ಬನಶಂಕರಿ ಬಾಬು, ಸತ್ಯಮಂಗಲ ಜಗದೀಶ್, ವಸಂತ ಸುದರ್ಶನ್, ರೇಖಾ ಶಿವಕುಮಾರ್, ಲತಾ ಬಾಬು, ರಾಧಾ, ನಾಗರಾಜು, ನಾಗೇಂದ್ರ ಚನ್ನಬಸಪ್ಪ, ಭರತ್ ದೇವರಾಜು, ಜೈಪುರ ಶಿವರಾಜ್, ಜಗದೀಶ್, ಮಂಜುಳಾ, ಲೋಕೇಶ್, ನಾಗರತ್ನ, ಗಾಯತ್ರಿ

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಕವಿಗಳು ಕಾಲಗರ್ಭಧಲ್ಲಿ ಕರಗಿ ಹೋಗುತ್ತಾರೆ. ಆದರೆ ಅವರ ಕಾವ್ಯ ನಿರಂತರ ನಿತ್ಯನೂತನ




ಮಧುಗಿರಿ : ಕವಿಗಳು ಕಾಲಗರ್ಭಧಲ್ಲಿ ಕರಗಿ ಹೋಗುತ್ತಾರೆ. ಆದರೆ ಅವರ ಕಾವ್ಯ ನಿರಂತರ ನಿತ್ಯನೂತನ ಎಂದು ಹಿರಿಯ ಸಾಹಿತಿ ಪ್ರೊ.ಮ.ಲ.ನ. ಮೂರ್ತಿ ಅಭಿಪ್ರಾಯೆ ಪಟ್ಟರು

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಡಾ.ಜಿ.ಎಸ್ ಶಿವರುದ್ರಪ್ಪಡಾ.ನಿಸಾರ್ ಅಹಮದ್,ಡಾ.ಸಿದ್ದಲಿಂಗಯ್ಯರ ಜನ್ಮದಿನಾಚರಣೆಯಲ್ಲಿ ಮಾತನಾಡಿ

ಜಿ .ಎಸ್ಸೆಸ್,ದೇವರನ್ನು ಪ್ರೀತಿ,ಕರುಣೆ ಮರುಕದಲ್ಲಿ ಹುಡುಕಿ ಬಾಳ ಭವ್ಯತೆಯನ್ನು ಬೆಳಕಿನಲ್ಲಿ ಕಟ್ಟಿ ಕೊಟ್ಟರು. ನಿಸಾರ್ ಅಹಮದ್ ಜೋಗದ ಸಿರಿಬೆಳಕಿನಲ್ಲಿ ನಾಡು ನುಡಿ,ಜನತೆ ಪ್ರಸಿದ್ಧಿಗೊಳಿಸಿದರು.ಸಿದ್ದಲಿಂಗಯ್ಯ ಸಿಡಿಲ ದನಿಮಲ್ಲಿ ದಲಿತ ಸಮುದಾಯದ ಆಕ್ರೋಶ ಅಸಮಾಧಾನ ವ್ಯಕ್ತಪಡಿಸಿದರು ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಟಿ.ಹೆಚ್. ಮಂಜುನಾಥ್ ಮಾತನಾಡಿ ,ಕನ್ನಡದ ದೀಪ ಹಚ್ಚುವ ಪವಿತ್ರ ಕಾರ್ಯ ನಿರ್ವಹಿಸಿದ ಈ ಕವಿಗಳು ಸಮಾಜಮುಖಿ ಚಿಂತಕರು,ದೇಶದ ಪ್ರಗತಿಯ ವಿಚಾರಪರರು ಆಗಿದ್ದರೆಂದು ತಿಳಿಸಿದರು.

ನಿವೃತ್ತ ಶಿಕ್ಷಕ ವೆಂಕಟರಮಣಪ್ಪ ಈ ಕವಿಗಳ ಭಾವಗೀತೆಗಳನ್ನು ಹಾಡಿ ಅವುಗಳ ಮಹತ್ವ, ಉದ್ದೇಶ ವ್ಯಾಖ್ಯಾನ ಮಾಡಿ ತಿಳಿಸಿದರು

ಉಪನ್ಯಾಸಕ ಡಾ.ಪಿ.ವಿ ಹನುಮಂತರಾಯಪ್ಪ ಮಾತನಾಡಿ ಸಾಹಿತ್ಯದ ಪ್ರಭಾವದಿಂದ ಆರೋಗ್ಯ ಕರ ಸಂವಾದ ಕಾರ್ಯಕ್ರಮನಡೆಸಲು ಸಾಧ್ಯ ಎಂದರು.

ಅಧ್ಯಕ್ಷತೆವಹಿಸಿದ್ದ ನಿವೃತ್ತ ಪ್ರಾಂಶುಪಾಲ ಡಿ.ಎಸ್ ಮುನೀಂದ್ರ ಕುಮಾರ್ ಮೊಬೈಲ್,ದೂರದರ್ಶನಗಳಿಗೆ ಅಡಿಕ್ಟ್ ಆಗಿರುವ ಮಕ್ಕಳು ಅವನ್ನು ಬಿಟ್ಟು ಯುವಜನಾಂಗ ಸಾಹಿತ್ಯ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಜನಪರ ಆಶಯವುಳ್ಳ ಸಾಹಿತ್ಯ ರಚಿಸುವ ಉತ್ಸಾಹ ತೋರಬೇಕು ಎಂದ ರಲ್ಲದೆ ,ತಮ್ಮ ವ್ಯಾಸಂಗದ ದಿನಗಳಲ್ಲಿ ಜಿ ಎಸ್ ಶಿವರುದ್ರಪ್ಪ, ಸಿದ್ಧಲಿಂಗಯ್ಯರ ಪಾಠ ಪ್ರವಚನ ವಿಧಾನ ನೆನಪಿಸಿದರು.

ಕಾರ್ಯಕ್ರಮದಲ್ಲಿ.ಪೂರವರ ಹೋಬಳಿ ಕ.ಸಾ.ಪ ಅಧ್ಯಕ್ಷ ಪಿ.ಕೆ ರಂಗಸ್ವಾಮಿ ಗಂಕಾರನಹಳ್ಳಿ ರಘು ಸ್ವಾಗತಿಸಿ,, ನಿರೂಪಿಸಿ,ವಂದಿಸಿದರು.

# ಪುನಶ್ಚೇತನಗೊಂಡ ಬಡಕೆಗುಡ್ಲು ಗ್ರಾಮದ 'ಬಕ್ಕನಕಟ್ಟೆ ಕೆರೆ' ಗ್ರಾಮಸ್ಥರಿಗೆ ಲೋಕಾರ್ಪಣೆ

ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ತಿಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಕೆಗುಡ್ಲು ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ವತಿಯಿಂದ ಪುನಶ್ಚೇತನಗೊಂಡ 908ನೇ "ನಮ್ಮೂರು ನಮ್ಮ ಕೆರೆ" (ಬಕ್ಕನಕಟ್ಟೆ ಕೆರೆ) ಹಸ್ತಾಂತರ ಕಾರ್ಯಕ್ರಮವು ಇಂದು ಶುಕ್ರವಾರ ಸಂಭ್ರಮದಿಂದ ಜರುಗಿತು. ಪರಮಪೂಜ್ಯ ರಾಜರ್ಷಿ ಡಾ|| ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಈ ಕೆರೆಯ ಹೂಳೆತ್ತಲಾಗಿದ್ದು, ಇದನ್ನು ಇಂದು ಅಧಿಕೃತವಾಗಿ ಗ್ರಾಮಸ್ಥರಿಗೆ ಹಸ್ತಾಂತರಿಸಲಾಯಿತು.



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ನಿರ್ದೇಶಕರಾದ ಪ್ರವೀಣ್ ಮಾತನಾಡಿ ನಮ್ಮೂರು ನಮ್ಮ ಕೆರೆ 2016 ಪ್ರಾರಂಭವಾಗಿದ್ದು 918 ಕೆರೆ ಅಭಿವೃದ್ಧಿ ಮಾಡಲಾಗಿದೆ, ಈ ವರ್ಷ ಒಂದು ಸಾವಿರ ಕೆರೆಗಳ ಅಭಿವೃದ್ಧಿ ಆಗಲು ಕ್ರಮ ಕೈಗೊಳ್ಳಲಾಗಿದೆ, ನಮ್ಮ ರಾಜ್ಯಾದ್ಯಂತ ಸೇವಾ ಮನೋಭಾವನೆ ಇಟ್ಟುಕೊಂಡು ಕೆಲಸ ನಿರ್ವಹಿಸುತ್ತಿದೆ.

ತಾಲ್ಲೂಕು ಯೋಜನಾಧಿಕಾರಿಗಳಾದ ಶ್ರೀ ಪ್ರೇಮಾನಂದ ಎಲ್.ಬಿ. ಅವರು ಮಾತನಾಡಿ, ಪೂಜ್ಯ ಹೆಗ್ಗಡೆಯವರ ಜಲಸಂರಕ್ಷಣಾ ಯೋಜನೆಯಿಂದಾಗಿ ಕೆರೆಯ ಸಂಗ್ರಹ ಸಾಮರ್ಥ್ಯ ಹೆಚ್ಚಾಗಿದ್ದು, ಇದು ಬಡಕೆಗುಡ್ಲು ಗ್ರಾಮದ ಅಂತರ್ಜಲ ವೃದ್ಧಿಗೆ ಪೂರಕವಾಗಲಿದೆ ಎಂದು ತಿಳಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ನೇತ್ರಾವತಿ ಅವರು ಕೆರೆಯ ಸಂರಕ್ಷಣೆಯ ಬಗ್ಗೆ ಮಾತನಾಡುತ್ತಾ, ಜಲಮೂಲಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಕಆಐ) ಶ್ರೀ ಬಾಬು ಶ್ರೀನಿವಾಸ್, ಕೃಷಿ ಮೇಲ್ವಿಚಾರಕರಾದ ಶ್ರೀ ಪ್ರಕಾಶ್ ಕೆ. ಹಾಗೂ ವಲಯ ಮೇಲ್ವಿಚಾರಕಿ ಶ್ರೀಮತಿ ಗಾಯಿತ್ರಿ ಅವರು ಉಪಸ್ಥಿತರಿದ್ದರು.

ಬಡಕೆಗುಡ್ಲು ಕೆರೆ ಸಮಿತಿ ಅಧ್ಯಕ್ಷ ಶ್ರೀ ರಾಮಚಂದ್ರಪ್ಪ ಬಿ.ಸಿ. ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಸಮಿತಿಯ ಸದಸ್ಯರುಗಳಾದ ಲಕ್ಷ್ಮಯ್ಯ, ಪೂಜಾರ್ ಯಲ್ಲಪ್ಪ, ಗೋವಿಂದಪ್ಪ ಬಿ.ಪಿ., ಗೋವಿಂದರಾಜು, ಬಿ.ಎಸ್. ಕೃಷ್ಣಮೂರ್ತಿ, ಟಿ. ತಿಮ್ಮಯ್ಯ ಹಾಗೂ ಗ್ರಾಮದ ಮುಖಂಡರಾದ ಗೋವಿಂದಪ್ಪ, ವೆಂಕಟರಾಮಯ್ಯ ಸೇರಿದಂತೆ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು. ಕೆರೆಗೆ ಮರುಜೀವ ನೀಡಿದ ಧರ್ಮಸ್ಥಳ ಯೋಜನೆಯ ಕಾರ್ಯಕ್ಕೆ ಬಡಕೆಗುಡ್ಲು ಗ್ರಾಮದ ಜನತೆ ಹರ್ಷ ವ್ಯಕ್ತಪಡಿಸಿದರು.

# ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಗ್ರಾಮ ಸ್ವರಾಜ್ ಪರಿಕಲ್ಪನೆ ಸಕಾರಗೊಳಬೇಕು

ಶಿರಾ : ಸರ್ಕಾರ ನೀಡುವಂತಹ ಅನುದಾನಗಳನ್ನು ಗ್ರಾಮಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಬ ಳಕೆ ಮಾಡುವ ಮೂಲಕ ಗ್ರಾಮ ಸ್ವರಾಜ್ ಪ'ರಿಕಲ್ಪನೆ ಸಕಾರ ಗೊಳಿಸಿದಾಗ, ಜನ ಗ್ರಾಮ ಪಂಚಾಯಿತಿ ಸದಸ್ಯನಾಗಿ ಆಯ್ಕೆ ಮಾಡಿದ್ದಕ್ಕೂ ಸಾರ್ಥಕವಾಗಲಿದೆ ಎಂದು ಶಿರಾ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವು ಚಂಗಾವರ ಹೇಳಿದರು. ಶಿ ರಾ ತಾಲೂಕಿನ ಗೌಡಗೆರೆ ಹೋಬಳಿಯ ಚ 'ಂಗಾವರ ಗ್ರಾಮ ಪಂಚಾಯತಿಯಲ್ಲಿ ಮಂಗಳವಾರ ಆಯೋಜಿಸಿದ್ದ ಸದಸ್ಯರ ಬೀಳ್ಕೊಡಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸದಸ್ಯರಿಗೆ ಸನ್ಮಾನಿಸಿ ಮಾತನಾಡಿದರು.

ಚಂಗಾವರ ಗ್ರಾಮ ಪಂಚಾಯಿತಿ 15.ನೇ ಹಣಕಾಸು ಹಾಗೂ ನರೇಗಾ ಯೋಜನೆಯನ್ನು ಸಮರ್ಪಕವಾಗಿ



ಬ ಳಸಿಕೊಂಡು ಗ್ರಾಮಗಳ ಅಭಿವೃದ್ಧಿ ಮಾಡಿದೆ, ಶಾಸಕ ಟಿ.ಬಿ.ಜಯಚಂದ್ರ ರವರ ಅನುದಾನ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಹಾಗೂ ಹಲವಾರು ಹಿರಿಯ ಮುಖಂಡರ ಸಹಕಾರದೊಂದಿಗೆ ಗ್ರಾಮ ಪಂಚಾಯಿತಿ ನೂತನ ಕಟ್ಟಡ ನಿರ್ಮಾಣ ಮಾಡಿದ್ದು ಗ್ರಾಮ ಆಡಳಿತಕ್ಕೆ ಶಕ್ತಿ ತುಂಬಿದಂತಾಗಿದೆ ಎಂದರು.

ಚಂಗಾವರ ಗ್ರಾಮ ಪಂಚಾಯತಿ ಅಧ್ಯಕ್ಷ ಲಕ್ಕಣ್ಣ ವ 'ಾತನಾಡಿ ಸಿ ಕ್ಕಿರುವ ಅ ವಧಿಯಲ್ಲಿ ಜ ನಸಾಮಾನ್ಯರ ಸ 'ಮಸ್ಯೆಗಳಿಗೆ ಸ 'ಂದಿಸಿ ಕೆಲಸ ವ 'ಾಡಿರುವುದು ನಿನಗೆ ತೃಪ್ತಿ ತಂದಿದೆ ಎಂದರು.

ಪಿಡಿಒ ಆರ್. ತಿಪ್ಪೇಸ್ವಾಮಿ ಗ್ರಾಮ ಪಂಚಾಯಿತಿಗೆ ಸರ್ಕಾರ ನೀಡುವಂತ ಅನುದಾನ ಹಾಗೂ ಉದ್ಯೋಗ ಖಾತ್ರಿ ಯೋಜನೆ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಅಭಿವೃದ್ಧಿ ಮಾಡಬೇಕೆಂಬ ಸದಸ್ಯರ ಸ 'ಂಕಲ್ಪ ಯಶಸ್ವಿಯಾಗಿ ಮುಗಿದಿದ್ದು, ನಿಮ್ಮ ಜನಸೇವೆಯನ್ನು ಜನ ಯಾವತ್ತೂ ಮರೆಯುವುದಿಲ್ಲ. ಜ ನಪ್ರತಿನಿಧಿ ಹಾಗೂ ಜನಸಾಮಾನ್ಯರು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಸ್ನೇಹಮಯಿ ಆ ಡಳಿತದಿಂದ ಗ್ರಾಮಗಳು ಅಭಿವೃದ್ಧಿ ಕಾಣಲು ಸಾಧ್ಯ ಎಂದರು.

ಗ್ರಾಮ ಪಂಚಾಯತಿ ಅಧ್ಯಕ್ಷ ಲಕ್ಕಣ್ಣ, ಉಪಾಧ್ಯಕ್ಷೆ ಬೊಮ್ಮಕ್ಕ, ಸದಸ್ಯರಾದ ಮೂಡಲಗಿರಿಯಪ್ಪ, ಈರ ಸಿದ್ದಮ್ಮ, ಸಿ.ವಿ. ಸುದರ್ಶನ್, ನಟರಾಜ್, ಭೂತಮ್ಮ, ಜಾನಕಮ್ಮ, ಕಾರ್ಯದರ್ಶಿ ಮಹಮ್ಮದ್ ಅಬೂಬಕ್ಕರ್ ಖಾನ್, ಮಾಜಿ ಸದಸ್ಯ ತಿಮ್ಮಣ್ಣ, ಮುಖಂಡ ಕಾರ ನಾಗಪ್ಪ, ಬಿಲ್ ಕಲೆಕ್ಟರ್ ಸಣ್ಣಪ್ಪ, ಡಿ ಇ ಓ ಎಸ್.ಕೆ .ರಂಗನಾಥ್, ಜಗನ್ ಜ್ಯೋತಿ ಸೇರಿದಂತೆ ಪಂಚಾಯತಿ ಸಿಬ್ಬಂದಿ ಉಪಸ್ಥಿತರಿದ್ದರು.

## ಸಣ್ ಸುದ್ದಿ



ತುಮಕೂರಿನ ಸಿದ್ದಗಂಗಾ ಮಠದಲ್ಲಿ ನಡೆಯುತ್ತಿರುವ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಗುಬ್ಬಿ ತಾಲ್ಲೂಕು ಚೇಳೂರಿನ ಶ್ರೀ ತುಳಸಿ ರಂಗನಾಥಸ್ವಾಮಿ ಇಂಜಿನಿಯರಿಂಗ್ ಅಂಡ್ ಟ್ರೇಡರ್ಸ್ ವತಿಯಿಂದ ತೆರೆಯಲಾಗಿರುವ ಎಲ್‌ಟಿಎನ್ ಅಡಿಕೆ ಸುಲಿಯುವ ಂಯಂತ್ರಗಳ ಮಳಿಗೆಯನ್ನು ಶಾಸಕ ಜ್ಯೋತಿಗಣೇಶ್ ಹಾಗೂ ಜಿಲ್ಲಾಧಿಕಾರಿ ಶುಭಕಲ್ಯಾಣ್ ಉದ್ಘಾಟಿಸಿದರು. ಶ್ರೀಮಠದ ಹೆಚ್ಚುವರಿ ಆಡಳಿತಾಧಿಕಾರಿ ಜಯವಿಭವಸ್ವಾಮಿ, ಮೈದಾಳ ಗ್ರಾ.ಪಂ. ಮಾಜಿ ಅಧ್ಯಕ್ಷ ಪಿ. ಮೂರ್ತಿ, ಎಲ್.ಎನ್. ಮಂಜುನಾಥ್, ಬಾಲರಾಜ್ ಮತ್ತಿತರರು ಭಾಗವಹಿಸಿದ್ದರು.

### "ವಾಲಿ ವಧೆ ನಾಟಕ ಪ್ರದರ್ಶನ"

ತುಮಕೂರು ಜಿಲ್ಲೆ ಕಲೆಯ ತವರೂರಾಗಿ ಮೆರೆದ ವೈಭವ, ಆಧುನಿಕ ಜಗತ್ತಿನಲ್ಲಿ ಒಂದೊಂದಾಗಿ ಮರೆಯಾಗುತ್ತಿವೆ. ಅವುಗಳನ್ನು ಉಳಿಸುವ, ಮುಂದಿನ ತಲೆಮಾರಿಗೆ ತಲುಪಿಸುವ ಪ್ರಯತ್ನವನ್ನು ಮೇಳೇಹಳ್ಳಿಯ ಡಮರುಗ ರಂಗ ತಂಡ ನಿರಂತರವಾಗಿ ಮಾಡುತ್ತಾ ಬರುತ್ತಿದೆ. ಯುವ ಪ್ರತಿಭೆಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ದಿನಾಂಕ 12-02-2026ನೇ ಗುರುವಾರ ಸಂಜೆ 6 ಗಂಟೆಗೆ ಮೇಳೇಹಳ್ಳಿಯ ವಿ.ರಾಮಮೂರ್ತಿ ರಂಗಸ್ಥಳದಲ್ಲಿ ಕುವೆಂಪುರವರ "ವಾಲಿ ವಧೆ" ನಾಟಕ ಪ್ರಯೋಗವನ್ನು ಆ ಯೋಜಿಸಿದ್ದು, ಹೇಮಂತ್ ನಿರ್ದೇಶನದಲ್ಲಿ ಅನನ್ಯ ಕಲಾತಂಡ ಅಭಿನಯುಸುತ್ತಿದೆ. ಪ್ರೇಕ್ಷಕ ಗಣ್ಯರಾಗಿ ಸಿ.ಎ. ವಿಶ್ವನಾಥ್ ಎಸ್., ಅಧ್ಯಕ್ಷರು ಅನನ್ಯ ಸಮೂಹ ಸಂಸ್ಥೆ, ಅಂಜನ್‌ಕುಮಾರ್ ಆಡಳಿತಾಧಿಕಾರಿಗಳು ಕೋರಾ ಗ್ರಾಮ ಪಂಚಾಯತಿ, ಹರೀಶ್‌ಕುಮಾರ್ ಬಿ., ಶಿಕ್ಷಕರು, ದೈಹಿಕ ಶಿಕ್ಷಣ ಉಪಸ್ಥಿತರಿರುವರು. ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಪ್ರಯೋಗಗೊಳ್ಳುತ್ತಿರುವ ಪ್ರಯೋಗಕ್ಕೆ ರಂಗಾಸಕ್ತರು ಬಂದು ಪ್ರೋತ್ಸಾಹಿಸಲು ಸಂಚಾಲಕರಾದ ಪ್ರಕಾಶ್ ಮೇಳೇಹಳ್ಳಿ, ಉಮೇಶ್ ಡಮರುಗ ಕೋರಿದ್ದಾರೆ.

# ಫೆ.17 ಮತ್ತು 18ರಂದು ಪ.ಜಾ/ಪ.ಪ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ತ 'ುಮಕೂರು: ಕರ್ನಾಟಕ ರಾಜ್ಯ ಅನುಸೂಚಿತ ಜ 'ಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆ ಯೋಗದ ಅಧ್ಯಕ್ಷ ಡಾ. ಮೂರ್ತಿ.ಎಲ್ ಅವರು ಫೆಬ್ರವರಿ 17 ಮತ್ತು 18, ರಂದು ತುಮಕೂರು ಜಿಲ್ಲೆಗೆ ಭೇಟಿ ನೀಡಿ, ವಿವಿಧ ಇಲಾಖಾವಾರು ಪರಿಶೀಲನೆ ಹಾಗೂ ಸಂವಾದ ಕಾರ್ಯಕ್ರಮಗಳನ್ನು ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧ ಇಲಾಖೆಗಳಿಂದ ಸಂಬಂಧಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಿದ್ಧತೆ ಕೈಗೊಳ್ಳುವಂತೆ ಸೂಚಿಸಲಾಗಿದೆ.

ತ 'ುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸಿಟಿ ಕ 'ಾರ್ಪೋರೇಷನ್, ನಗರಸಭೆ, ಪುರಸಭೆಗಳಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಯೋಜನೆಗಳ ವಿವರ ಮತ್ತು ತೆರಿಗೆ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದ ಅಭಿವೃದ್ಧಿಗೆ ವಿನಿಯೋಗಿಸುತ್ತಿರುವ ವಿವರಗಳ ಮಾಹಿತಿ ಕುರಿತು 17 ಮತ್ತು 18ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತುಮಕೂರು ಜಿಲ್ಲೆಯಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಯೋಜನೆಗಳ ಅನುಷ್ಠಾನದ ಕುರಿತು ಸಮಗ್ರ ಪರಿಶೀಲನಾ ಸಭೆ ನಡೆಸಲಾಗುವುದು. ಜಿಲ್ಲಾ ಮಟ್ಟದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅನುಷ್ಠಾನಾಧಿಕಾರಿಗಳು ಯೋಜನೆಯಡಿ ಬಿಡುಗಡೆಯಾದ ಅನುದಾನದಿಂದ ಕೈಗೊಂಡಿರುವ ಕಾಮಗಾರಿಗಳ ವಿವರ, ಇದುವರೆಗೆ ಸಾಧಿಸಿದ ಪ್ರಗತಿ ಹಾಗೂ ಅನುದಾನ ಬಳಕೆಯ ಸ್ಥಿತಿಗತಿ ಕುರಿತು ಚರ್ಚೆ. ಜಿಲ್ಲೆಯಾದ್ಯಂತ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳ ಕುರಿತು ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳ ವಿವರಗಳನ್ನು ಪರಿಶೀಲಿಸಲಾಗುವುದು. ಜೊತೆಗೆ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದವರಿಗೆ ಸ್ಮಶಾನ ಭೂಮಿಯನ್ನು ಹೊಂದಿರುವ ಮತ್ತು ಹೊಂದಿರದ ಗ್ರಾಮಗಳ ವಿವರಗಳ ಕುರಿತು ಚರ್ಚೆ ನಡೆಯಲಿದೆ.

ಪ 'ರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಾಲೋನಿಗಳಲ್ಲಿ ಸಿ.ಸಿ. ರಸ್ತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ ಪ್ರಗತಿ ವರದಿ ಪಡೆಯಲಾಗುವುದು. ಈ ಸಂಬಂಧ ಲೋಕೋಪಯೋಗಿ ಇಲಾಖೆ (ತುಮಕೂರು ಮತ್ತು ಮಧುಗಿರಿ ಉಪವಿಭಾಗ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ (ತುಮಕೂರು ಮತ್ತು ಮಧುಗಿರಿ ಉಪವಿಭಾಗ), ಸಣ್ಣ ನೀರಾವರಿ ಇಲಾಖೆ, ಕಾವೇರಿ ನೀರಾವರಿ ನಿಗಮ ನಿಯಮಿತ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಹಾಗೂ ಹೇಮಾವತಿ ನಾಲಾ ವಲಯದ ಅಧಿಕಾರಿಗಳು ತಮ್ಮ ಇಲಾಖಾ ಮಟ್ಟದ ಕಾಮಗಾರಿಗಳ ವಿವರಗಳನ್ನು ಮಂಡಿಸಲಾಗುವುದು.

ದ 'ೌರ್ಜನ್ಯ ಪ್ರಕರಣಗಳ ಸ್ಥಿತಿ ಹಾಗೂ ಜಿಲ್ಲೆಗೆ ಸ 'ಂಬಂಧಪಟ್ಟಂತೆ ಪಿ.ಟಿ.ಸಿ.ಎಲ್. ಕಾಯ್ದೆಯಡಿ ಜಿಲ್ಲಾಧಿಕಾರಿಗಳ ನ್ಯಾಯಾಲಯ, ತಹಶೀಲ್ದಾರ್ ನ್ಯಾಯಾಲಯ ಮತ್ತು ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ದಾಖಲಾಗಿರುವ ಒಟ್ಟು ಪ್ರಕರಣಗಳು ಹಾಗೂ ಬಾಕಿ ಇರುವ ಪ್ರಕರಣಗಳ ವಿವರಗಳ ಕುರಿತೂ ಚರ್ಚೆ ನಡೆಯಲಿದೆ.

# ಕಾರು ಬೈಕ್ ಅಪಘಾತ : ಓರ್ವ ವ್ಯಕ್ತಿ ಸ್ಥಳದಲ್ಲೇ ಸಾವು

ಗ 'ುಬ್ಬಿ: ತಾಲ್ಲೂಕಿನ ಚೇಳೂರು ಸಮೀಪದ ಕೋಡಿಪಾಳ್ಯ ಗ್ರಾಮದ ಗ 'ೇಟ್ ಬಳಿಯ ತುಮಕೂರು ರಸ್ತೆಯಲ್ಲಿ ಕಾರು ಮತ್ತು ಬೈಕ್ ನಡುವೆ ನಡೆದ ಭೀಕರ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತ ಪಟ್ಟಿರುವ ಘಟನೆ ನಡೆದಿದೆ.



ಡ 'ಾಬಸ್ ಪೇಟೆ ಬಳಿಯ ತ್ಯಾಮಗೊಂಡ್ಲು ಗ್ರಾಮದ ವಸಿಂಪಾಷ (25) ಎಂಬ ವ್ಯಕ್ತಿ ಅಪಘಾತಕ್ಕಿಡಾಗಿ ಮೃತಪಟ್ಟ ದುರ್ದೈವಿ. ಚ 'ೇಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕೋಡಿಪಾಳ್ಯ ಗೇಟ್ ಬಳಿ ತುಮಕೂರು ಕಡೆಯಿಂದ ಬಂದ ಮಾರುತಿ ಸುಜುಕಿ ಕಂಪನಿಯ ಕಾರು ವೇಗವಾಗಿ ಚಾಲನೆ ಮಾಡಿಕೊಂಡು ದ್ವಿಚಕ್ರ ವಾಹನ ಸವಾರನಿಗೆ ಗುದ್ದಿದ ಪರಿಣಾಮ ಬೈಕ್ ಸ 'ವಾರ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ.

ಚ 'ೇಳೂರು ಪೊಲೀಸರು ಸ್ಥಳಕ್ಕೆ ಧಾವಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮ ಪಡಿಸುವ ಕುರಿತು ಮಕ್ಕಳೊಂದಿಗೆ ಸಮಾಲೋಚನೆ

ತ 'ುಮಕೂರು- ನಗರದ ರಾಜೀವ್ ಗಾಂಧಿ ನ 'ಗರದಲ್ಲಿರುವ ಮೌಲಾನ ಆಜಾದ್ ಮಾದರಿ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶ'ಬ್ಬೀರ್ ಅಹಮದ್ ರವರು ಭೇಟಿ ನೀಡಿ ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮ ಪಡಿಸುವ ಸಂಬಂಧ ಶಿಕ್ಷಕರು ಮತ್ತು ಮಕ್ಕಳೊಂದಿಗೆ ಸಮಾಲೋಚನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಶುಭಕಲ್ಯಾಣ್ ಅವರು ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮ ಪಡಿಸುವ ಸಂಬಂಧ ಶಿಕ್ಷಣ ಇಲಾಖೆ ಹಾಗೂ ವ 'ಸತಿ ಶಾಲೆಗಳ ಮುಖ್ಯಸ್ಥರು, ಅಧಿಕಾರಿಗಳ ಸಭೆ ನ 'ಡೆಸಿ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಬೆಳಿಗ್ಗೆ 6 ಗಂಟೆಗೆ ಮೌಲಾನ ಆಜಾದ್ ಮಾದರಿ ಶಾಲೆಗೆ ಭೇಟಿ ನೀಡಿದ ಈ ಅಧಿಕಾರಿಗಳು ಎಸ್ಸೆಸ್ಸೆಲ್ಸಿ ತರಗತಿಗಳಿಗೆ ತೆರಳಿ ಪೂರ್ವ ಸಿದ್ದತಾ-3 ಪರೀಕ್ಷೆ ವೇಳೆಗೆ ಮೂರು ಪ 'ರೀಕ್ಷೆಗಳನ್ನು ನಡೆಸಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕ್ರಮ ವಹಿಸುವಂತೆ ಶಿಕ್ಷಕರುಗಳಿಗೆ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಹ 'ನುಮಂತಪ್ಪ ಅವರು, ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮಗೊಳಿಸುವ ಕುರಿತು ಜಿಲ್ಲಾಧಿಕಾರಿಗಳು ಸಭೆ ನಡೆಸಿ ಸೂಚನೆ ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ನಾವೆಲ್ಲಾಕಾರ್ಯೋನ್ಮುಖವಾಗಿದ್ದು, ಈ ಶಾಲೆಗೆಭೇಟಿನೀಡಿ ಎಸ್ಸೆಸ್ಸೆಲ್ಸಿ ಮಕ್ಕಳಿಗೂ ಯಾವ ರೀತಿ ಅಭ್ಯಾಸ ಮಾಡಬೇಕು



ಎಂಬ ಬಗ್ಗೆಯೂ ತಿಳಿಸಿಕೊಡಲಾಗಿದೆ ಎಂದರು.

ಈ ಶಾಲೆಯ ಶಿಕ್ಷಕರು ಮತ್ತು ಮಕ್ಕಳೊಂದಿಗೆ ಸ 'ಮಾಲೋಚನೆ ನಡೆಸಿದ್ದು, ಬೆಳಿಗ್ಗೆ 6.55 ರ ವರೆಗೆ 19 ಮಕ್ಕಳು ಶಾಲೆಗೆ ಹಾಜರಾಗಿದ್ದರು. ಉಳಿದ ಮಕ್ಕಳು ಸಹ ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳಬೇಕು ಎಂದು ಶಾಲೆಯ ಪ್ರಾಚಾರ್ಯರು ಹಾಗೂ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ಎ ಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಯುವವರೆಗೂ ಬೆಳಿಗ್ಗೆ 6 ಗಂಟೆಯಿಂದಲೇ ತರಗತಿ ನಡೆಸುವಂತೆ ತಿ ಳಿಸಲಾಗಿದೆ ಎಂದು ಹೇಳಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶ'ಬ್ಬೀರ್ ಅಹಮದ್ ಮಾತನಾಡಿ, 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮ ಪಡಿಸುವ ಕುರಿತು ಜಿಲ್ಲಾಧಿಕಾರಿಗಳು ಸಭೆ ನಡೆಸಿ ಶೇ. 100 ರಷ್ಟು ಫಲಿತಾಂಶಕ್ಕೆ ಶ್ರಮ ವ 'ಹಿಸುವಂತೆ ಸೂಚಿಸಿದ್ದಾರೆ. ಅದರಂತೆ ಮೌಲಾನ ಆಜಾದ್ ಮ 'ಾದರಿ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ತರಗತಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸ 'ಮಾಲೋಚಿಸಲಾಯಿತು ಎ ಂದರು.

ಪೂರ್ವ ಸಿದ್ದತಾ-1 ಮತ್ತು 2 ಪರೀಕ್ಷೆಗಳಲ್ಲಿ ಪಡೆದಿರುವ ಫಲಿತಾಂಶ ವಿಶ್ಲೇಷಣೆ ಮಾಡಿ ತಿಳಿಸಿ,ಫಲಿತಾಂಶವನ್ನುಮತ್ತಷ್ಟುಉತ್ತಮಪಡಿಸಿಕೊಳ್ಳುವಂತೆ ಸ 'ೂಚನೆ ನೀಡಲಾಯಿತು ಎಂದು ಹೇಳಿದರು. ಪ 'ರೀಕ್ಷಾ ದೃಷ್ಟಿಯಿಂದ ಹೆಚ್ಚು ಸಮಯ ಅ ಭ್ಯಾಸ ಮಾಡುವಂತೆ ತಿಳಿಸಿ, ಈ ನಿಟ್ಟಿನಲ್ಲಿ ಶಿ ಕ್ಷಕರಿಗೂ ಸೂಚನೆ ನೀಡಲಾಗಿದೆ ಎಂದರು. ಇದೇ ವೇಳೆ ಮೌಲಾನ ಆಜಾದ್ ಮಾದರಿ ಶಾಲೆಯ ಆ ವರಣ, ಸುತ್ತಮುತ್ತ ಸ್ವಚ್ಛತೆ ಕಾಪಾಡುವಂತೆ ಶ 'ಾಲೆಯ ಶಿಕ್ಷಕರಿಗೆ ಅವರು ಸೂಚಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ತಿ ಪ್ಪೇಸ್ವಾಮಿ ಆರ್. ಹಾಗೂ ಶಿಕ್ಷಕರು ಇದ್ದರು.

# ವ್ಯಕ್ತಿತ್ವ ವಿಕಸನಕ್ಕೆ ಜೆಸಿಐ ಚಟುವಟಿಕೆ ಸಹಕಾರಿ

ತ 'ುಮಕೂರು: ಯುವಜನರಲ್ಲಿ ನಾಯತ್ವ ಗುಣ, ವ್ಯಕ್ತಿತ್ವ ವಿಕಸನ ಬ 'ೆಳೆಸಲು ಜೆಸಿಐ ತುಮಕೂರು ಮ 'ೆಟ್ರೋ ನಗರದಲ್ಲಿ ಜೆಸಿಐನ ಪ 'ರಿಚಯಾತ್ಮಕ ಶಿಬಿರ ಹಮ್ಮಿಕೊಂಡಿತ್ತು. ಜೆಸಿಐ ರಾಷ್ಟ್ರೀಯ ಪೂರ್ವ ಅಧ್ಯಕ್ಷ ಟಿ.ವಿ.ಎನ್.ಮೂರ್ತಿ ಭಾಗವಹಿಸಿ, ಜೆಸಿಐ ಸಂಸ್ಥೆ ಕಳೆದ 35 ವರ್ಷಗಳಿಂದ ಯುವನಜರಲ್ಲಿ ನಾಯಕತ್ವಗುಣಗಳನ್ನು ಬೆಳೆಸುವ ಹಾಗೂ ವ್ಯಕ್ತಿತ್ವ ವಿಕಾಸ ತರಬೇತಿ ಶಿಬಿರಗಳ ಮ 'ೂಲಕ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಈ ಮೂಲಕ ಯುವಜನರಲ್ಲಿ ರಾಷ್ಟ್ರ ನಿರ್ಮಾಣ ಚಟುವಟಿಕೆಗೂ ಪ್ರೇರಣೆಯಾಗಿದೆ ಎಂದರು.



ಜೆಸಿಐನ ದೃಷ್ಟಿ, ಮೌಲ್ಯಗಳು, ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಲಭ್ಯವಿರುವ ಅಪಾರ ಅವಕಾಶಗಳನ್ನು ಈ ಸಂಸ್ಥೆಯಲ್ಲಿ ತೊಡಗಿಕೊಂಡು ನ 'ಾಯಕತ್ವ ಗುಣ, ವ್ಯಕ್ತಿತ್ವ ಬೆಳವಣಿಗೆಗೆ ಸಹಾಯವಾಗುತ್ತದೆ. 18ರಿಂದ 40 ವರ್ಷದೊಳಗಿನ ಂ ಯುವಜನರಿಗಾಗಿ ಜೆಸಿಐ 130ಕ್ಕೂ ಹೆಚ್ಚು ದೇಶಗಳಲ್ಲಿ ಜಾಲ ಹೊಂದಿದೆ. ಯುವಜನರನ್ನು ಸಮರ್ಥ, ಜವಾಬ್ದಾರಿಯುತ ಹಾಗೂ ನಾಯಕತ್ವ ಗ 'ುಣಗಳಿಂದ ಕೂಡಿದ ನಾಗರೀಕರನ್ನಾಗಿ ರೂಪಿಸಲು ಜೆಸಿಐ ಶ್ರಮಿಸುತ್ತಿದೆ. ಪ್ರತಿ ಸದಸ್ಯನಿಗೂ ಸಕಾರಾತ್ಮಕ ಬದಲಾವಣೆ ತರಲು ಬದ್ಧರಾಗಿರುವ ಂಯುವ ಸಕ್ರಿಯ ನಾಗರೀಕರ ಜಾಗತಿಕ ಜಾಲಕ್ಕೆ ಪ್ರವೇಶ ದೊರೆಯುತ್ತದೆ. ಯುವಜನರು ಜೆಸಿಐನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಬ 'ೆಳೆಯಬೇಕು ಎಂದು ಟಿ.ವಿ.ಎನ್.ಮೂರ್ತಿ ಕೋರಿದರು.

18ರಿಂದ 40 ವರ್ಷದೊಳಗಿನ ವಯೋಮಾನದ 8 0ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ವಿಶೇಷವಾಗಿ ನಗರದ ವಿದ್ಯಾನಿಧಿ ಕಾಲೇಜಿನ ಎಂಬಿಎ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಜ 'ೆಸಿಐನ ರಾಷ್ಟ್ರೀಯ ಉಪಾಧ್ಯಕ್ಷೆ ಯಶಸ್ವಿನಿ ಭಾಗವಹಿಸಿ ಮಾತನಾಡಿದರು. 91 ನಿಮಿಷದ ನ 'ಾಟಕದ 17 ಪಾತ್ರಗಳನ್ನು ಏಕಪಾತ್ರದಲ್ಲಿ ನಿರ್ವಹಿಸಿ ಏಷಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿರುವ ಕಲಾವಿದ ನೀನಾಸಂ ಶ್ರೀನಿವಾಸಮೂರ್ತಿ ಅವರನ್ನು ಈ ವೇಳೆ ಜೆಸಿ ತುಮಕೂರು ಮೆಟ್ರೋದಿಂದ ಸನ್ಮಾನಿಸಲಾಯಿತು. ಜೆಸಿ ತುಮಕೂರು ಮೆಟ್ರೋ ಘಟಕ ಅಧ್ಯಕ್ಷೆ ಮಮತಾ ರಾಜ್, ಕಾರ್ಯದರ್ಶಿ ಸುನೀತ್ ರಾಜ್ ಹಾಗೂ ಸದಸ್ಯರು ಭಾಗವಹಿಸಿದ್ದರು.

# ಧರ್ಮದ ಜಾಗೃತಿಗಾಗಿ ಪ್ರಪಥಮ ಬಾರಿಗೆ ಸಿದ್ದರ ಬೆಟ್ಟದಲ್ಲಿ ಅದ್ದೂರಿ ಶಿವರಾತ್ರಿ ಜಾಗರಣೆ: ಗಮನ ಸೆಳೆಯುವ ಕಾರ್ಯ ಕ್ರಮಗಳು

ಕೊರಟಗೆರೆ; ಸಿದ್ದರಬೆಟ್ಟದಲ್ಲಿ ಈ ಭಾರಿ ಶಿವರಾತ್ರಿ ಹಬ್ಬದ ಜಾಗರಣೆಯನ್ನ ಧರ್ಮ ಪ್ರಚಾರ, ಧರ್ಮದ ಜಾಗೃತಿ, ಹಾಗೂ ಜನರಿಗೆ ಆಧ್ಯಾತ್ಮಿಕ ಚಿಂತನೆಯನ್ನ ಮೂಡಿಸಬೇಕು ಎಂದು ಪ್ರಪಥವಾಗಿ ಸಿದ್ದರಬೆಟ್ಟದಲ್ಲಿ ಅದ್ದೂರಿ ಜಾಗರಣೆ ಕಾರ್ಯಕ್ರಮವನ್ನ ಹಮ್ಮಿಕೊಳ್ಳಲಾಗಿದೆ. ಎಂದು ಸಿದ್ದರಬೆಟ್ಟದ ಬಾಳೆ ಹೊನ್ನೂರು ಖಾಸಾ ಶಾಖಾ ಮಠದ ಪೀಠಾಧ್ಯಕ್ಷ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಮ್ಮಗ್ರಾಮೀಣ ಭಾಗದಲ್ಲಿ ಇದೆ ಪ್ರಥಮ ಬಾರಿಗೆ ಶ್ರೀ ಮಠದಲ್ಲಿ ಶಿವರಾತ್ರಿ ಹಬ್ಬದೊಂದು ಜಾಗರಣೆ ಮಾಡುವ ವಿಶೇಷ ಕಾರ್ಯಕ್ರಮಗಳನ್ನ ಎಲೆರಾಂಪುರ ಶ್ರೀಗಳು ಮಾರ್ಗದರ್ಶನ ಹಾಗೂ ಉದ್ಯಮಿ ನಿಲೇಶ್ ಅವರ ನೇತೃತ್ವದಲ್ಲಿಈ ಜಾಗರಣಾ ಮಹೋತ್ಸವವನ್ನ ಏರ್ಪಡಿಸಲಾಗಿದ್ದು, ಸಂಜೆ 6 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮ ಬೆಳಗಿನ ಜಾವದವರೆಗೂ ನಡೆಯಲಿದೆ. ಶಿವರಾತ್ರಿ ಹಬ್ಬದಂದು ಜಾಗರಣೆಗೆ ಬರುವ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಭಾಗವಹಿಸುವರು. ಬರುವ ಎಲ್ಲಾ ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಗ್ರಾಮೀಣ ಭಾಗದ ಒಬ್ಬ ಯುವಕ ಇಂದು ಹೊರ ದೇಶವಾದ ದುಬೈನಲ್ಲಿ ಉದ್ಯಮ ಮಾಡಿ ಬಹಳಷ್ಟು ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ನೀಡುವ ಮೂಲಕ ಮತ್ತು ತಾಯ್ನುಡಿನಲ್ಲಿ ಬಂದು ಇಂತಹ ಧಾರ್ಮಿಕ ಕಾರ್ಯಕ್ರಮಗಳನ್ನ ಆಯೋಜನೆ ಮಾಡಿ ಧರ್ಮ ಜಾಗೃತಿ ಮೂಡಿಸುತ್ತಿರುವ ಹೆಮ್ಮೆಯ ವಿಷಯವಾಗಿ. ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನ ವಹಿಸಿಕೊಂಡಿದ್ದಾರೆ ಎಂದು ತಿಳಿಸಿದರು.



ಎಲೆರಾಂಪುರ ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಹನುಮಂತನಾಥ ಸ್ವಾಮೀಜಿ ಮಾತನಾಡಿ, ಶಿವರಾತ್ರಿ ಜಾಗರಣೆ ಮಹೋತ್ಸವ ಜನರಲ್ಲಿ ಭಕ್ತಿ ಭಾವ ಹೆಚ್ಚು ಮಾಡಲಿ. ಈ ಜಾಗರಣೆಯಿಂದ ಜನರು ಜಾಗೃತರಾಗಬೇಕು.ಇದೆ ಪ್ರಥಮವಾಗಿ ಜಿಲ್ಲೆಯಲ್ಲೇ ಎಲ್ಲಿಯೂ ಮಾಡದಂತ ಜಾಗರಣಾ ಕಾರ್ಯಕ್ರಮಕ್ಕೆ ಸುಮಾರು ಒಂದು ಕೋಟಿ ರೂ. ಖರ್ಚಿನಲ್ಲಿ ಉದ್ಯಮಿ ನೀಲೇಶ್ ಅವರು ಈ ಕಾರ್ಯಕ್ರಮದ ಜಾವಬ್ದಾರಿಯನ್ನ ವಹಿಸಿಕೊಂಡಿದ್ದಾರೆ. ಈ ಜಾಗರಣೆ ಕಾರ್ಯಕ್ರಮದಲ್ಲಿ ಹೆಸರಾಂತ ಸಿನಿಮಾ ನಟರು ರಿಯಾಲಿಟಿ ಶೋ ಹಾಗೂ ಭಕ್ತಿ ಗೀತೆ ಗಾಯಕರು ಶಿವ ಮತ್ತು ನಂದಿ ಸೇರಿದಂತೆ ಧಾರ್ಮಿಕ ಇರುವ ಎಲ್‌ಇಡಿ ಲೇಜರ್ ಶೋ, ಸೇರಿದಂತೆ ಅನೇಕ ಧಾರ್ಮಿಕ ಕಾರ್ಯ ಕ್ರಮಗಳು ನಡೆಯಲಿದ್ದು, ಕೊರಟಗೆರೆ ಸೇರಿದಂತೆ ಜಿಲ್ಲೆಯ ಹೆಚ್ಚು ಹೆಚ್ಚು ಜನರು ಈ ಕಾರ್ಯಕ್ರಮಕ್ಕೆ ಆಗಮಿಸಿ ಶಿವರಾತ್ರಿ ಜಾಗರಣೆ ಯಶಸ್ವಿಗೊಳಿಸಿ ಎಂದು ತಿಳಿಸಿದರು.

ಉದ್ಯಮಿ ನೀಲೇಶ್ ಮಾತನಾಡಿ ಇತ್ತೀನ ಪೀಳಿಗೆ ಧರ್ಮದ ಬಗ್ಗೆ, ಧರ್ಮಜಾಗೃತಿಯ ಅರಿವು ಮೂಡಿಸಲು ಮಹಾಶಿವರಾತ್ರಿ ಹಬ್ಬದೊಂದ ಸಿದ್ದರ ಬೆಟ್ಟದ ಶ್ರೀ ಮಠದ ಅವರಣದಲ್ಲಿ ಜಾಗರಣೆ ಮಹೋತ್ಸವವನ್ನ ಏರ್ಪಡಿಸಲಾಗಿದ್ದು, ಅಂದು ಜಾಗರಣೆಯಲ್ಲಿ ಮನರಂಜನೆ, ಶಿವ ಭಜನೆ, ಹಾಡುಗಳು ಹಾಗೂ ಹಾಸ್ಯ, ಜಾನಪದ ನೃತ್ಯ ಎಲ್ಲಾ ತರಹದ ಕಾರ್ಯಕ್ರಮ ಇರುವುದು ಸೇರಿದಂತೆ ಹೆಸರಾಂತ ಸಿನಿಮಾ ನಟರು ರಿಯಾಲಿಟಿ ಶೋ ಸ್ಪರ್ಧಿಗಳು ಹಾಗೂ ಭಕ್ತಿ ಗೀತೆ ಗಾಯಕರು ಇನ್ನೂ ಅನೇಕ ಗಣ್ಯರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ರುದ್ರೇಶ್, ಪತ್ರಕರ್ತರಾದ ಪುರು ಷೋತ್ತಮ್, ಎನ್, ಮೂರ್ತಿ, ಮಠದ ರುದ್ರಮುನಿ, ಸೇರಿದಂತೆ ಇತರರು ಇದ್ದರು.

ಅಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕಾರ್ಯಕ್ರಮವನ್ನ ಉದ್ಘಾಟನೆ ಮಾಡಲಿದ್ದಾರೆ. ಇವರ ಜೊತೆ ಕೇಂದ್ರ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಮಧುಗಿರಿ ಶಾಸಕ ರಾಜಣ್ಣ, ಸೇರಿದಂತೆಜಿಲ್ಲೆಯಎಲ್ಲಾತಾಲೂಕಿನ ಶಾಸಕರು ವಿಧಾನ ಪರಿಷತ್ ಸದಸ್ಯರು, ವಿವಿಧ ಮಠಾದೀಶರು, ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.ಮಠದಲ್ಲಿ ಆಯೋಜಿಸಿದ್ದ ಸುದ್ದಿ ಗೋಷ್ಠಿಯಲ್ಲಿ ಸಿದ್ದರ ಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಜೀ, ಎಲೆ ರಾಂಪುರ ಶ್ರೀ ಮಠದ ಡಾ.ಹನುಮಂತನಾಥ ಸ್ವಾಮೀಜಿ, ಉದ್ಯಮಿ ನೀಲೇಶ್ ಸೇರಿದಂತೆ ಇತರರು ಇದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.